ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಬಿರುಸಿನ ಅರ್ಧಶತಕದ (56 ರನ್) ಬೆಂಬಲದೊಂದಿಗೆ ಭಾರತ ತಂಡವು, ಐಸಿಸಿ ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ 4 ವಿಕೆಟ್ ನಷ್ಟಕ್ಕೆ 170 ರನ್‌ಗಳ ಸವಾಲಿನ ಮೊತ್ತ ಪೇರಿಸಿದೆ.

29 ಜೂನ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 110 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಅಕ್ಷರ ಲೋಕದ ಆತ್ಮ ಸಂಗೀತವೂ, ಫಾಂಟ್‌ಗಳ ವಿಶಿಷ್ಟ ಲೋಕವೂ ! » 2



ಮಕ್ಕಳ ಆರೋಗ್ಯಕ್ಕಾಗಿ ಪೋಲಿಯೋ ಹನಿ ಹಾಕಿಸಿ » 3



ರಕ್ಷಣೆ ಸ್ವಾವಲಂಬನೆ ದೇಶಕ್ಕೆ ಹೆಮ್ಮೆ » 4


# ಕೇಂದ್ರ ಮಂತ್ರಿ ಮಂಡಲಕ್ಕೆ ಶೀಘ್ರ ಸರ್ಜರಿ

## ಮಳೆಗಾಲದ ಅಧಿವೇಶನಕ್ಕೂ ಮೊದಲೇ ಪುನರ್ ರಚನೆ | ಹಲವರಿಗೆ ಕೋಕ್ ಸಾಧ್ಯತೆ

• ಪ್ರಜೋದಯ ವರದಿ

**ನವದೆಹಲಿ:** ಸಂಸತ್ತಿನ ಮಳೆಗಾಲದ ಅಧಿವೇಶನಕ್ಕೂ ಮೊದಲು ಪ್ರಧಾನಿ ನರೇಂದ್ರ ಮೋದಿ ಮಂತ್ರಿ ಮಂಡಲ ಪುನರ್ ರಚನೆಯಾಗುವ ಸಾಧ್ಯತೆ ಇದ್ದು, ಯಾವ ಸಂದರ್ಭದಲ್ಲಾದರೂ ಪ್ರಕ್ರಿಯೆ ಪ್ರಾರಂಭವಾಗಬಹುದು.

ಜುಲೈ 3ನೇ ವಾರದಿಂದ ಅಧಿವೇಶನ ಆರಂಭವಾಗಲಿದೆ. ರಾಜ್ಯ ಘಟಕಗಳಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ನೇತೃತ್ವದಲ್ಲಿ ಹೊಸ ತಂಡದ ಘೋಷಣೆಯ ಜೊತೆ ಜೊತೆಗೇ ಮಂತ್ರಿ ಪರಿಷತ್ ಪುನರ್ ರಚನೆ ಮಾಡಲಾಗುತ್ತದೆ. ನಿತಿನ್ ನಬೀನ್ ಅವರ ತಂಡವನ್ನು ಶೀಘ್ರದಲ್ಲೇ ಘೋಷಿಸುವ ಸಾಧ್ಯತೆ ಇದೆ. ಬಿಜೆಪಿಯ ಉನ್ನತ ನಾಯಕರು ಪಟ್ಟಿಯನ್ನು ಅಂತಿಮ ಗೊಳಿಸಿ ದ್ದಾರೆಂದು ನಂಬಲಾಗಿದೆ. ಯುವಕರಿಗೆ ಪ್ರಮುಖ ಸಂಘಟನಾ ಹೊಣೆ ನೀಡುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ಈ ಸಂಬಂಧ ನಿತಿನ್



ನಬೀನ್, ಕಳೆದ ವಾರ ಕೇಂದ್ರದ ಕೆಲ ರಾಜ್ಯ ಸಚಿವರೊಂದಿಗೂ ಸಮಾಲೋಚನೆ ನಡೆಸಿದ್ದಾರೆ. ಕೆಲ ಕೇಂದ್ರ ಸಚಿವರನ್ನು ಪಕ್ಷದ ಸಂಘಟನಾ ಕೆಲಸಕ್ಕೆ ನಿಯೋಜಿಸುವ ಮತ್ತು ಪಕ್ಷದ ಕೆಲ ನಾಯಕರನ್ನು ಮೋದಿ ಸಂಪುಟಕ್ಕೆ ಸೇರಿಸಿಕೊಳ್ಳುವ ಬಲವಾದ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ಕೆಲವು ಸಚಿವರ ಖಾತೆ ಬದಲಾವಣೆಗಳ ಬಗ್ಗೆಯೂ ಸುದ್ದಿ ಹಬ್ಬಿದೆ. ನೀಟ್ ಪತ್ರಿಕೆ ಸೋರಿಕೆ ಮತ್ತು ಸಿಬಿಎಸ್‌ಇ ಡಿಜಿಟಲ್ ಮಾರ್ಕಿಂಗ್ ವ್ಯವಸ್ಥೆಯಲ್ಲಿನ ಅಕ್ರಮ ಸೇರಿ ಶಿಕ್ಷಣ ಸಚಿವಾಲಯದ ವಿರುದ್ಧ ಹಲವು ಆರೋಪಗಳ ಹಿನ್ನಲೆ ಸಚಿವ ಧರ್ಮೇಂದ್ರ ಪ್ರಧಾನ್ ಕುರ್ಚಿ ಅಲುಗಾಡುತ್ತಿದೆ. ಮಂತ್ರಿ ಮಂಡಲ ಪುನರ್ ರಚನೆಯು ಪ್ರಧಾನಿ ನರೇಂದ್ರ ಮೋದಿಯವರ ನಿಗದಿತ ವಿದೇಶ ಪ್ರವಾಸಗಳನ್ನು ನೋಡಿಕೊಂಡೇ ಮಾಡಲಾಗುತ್ತಿದೆ. ಜೂ. 27ರಿಂದ 29ರ ವರೆಗೆ ಮೋದಿ ಸೀಚೆಲ್ಸ್ ಪ್ರವಾಸ ಕೈಗೊಂಡಿದ್ದಾರೆ. ಜು. 6ರಿಂದ 11ರ ವರೆಗೆ ಇಂಡೋನೇಷಿಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳುವ ನಿರೀಕ್ಷೆಯೂ ಇದೆ. ಜು. 1ರಿಂದ 3ರ ವರೆಗೆ ಜಪಾನ್ ಪ್ರಧಾನಿಯ ಭಾರತ ಭೇಟಿ ನಿಗದಿಯಾಗಿದೆ. ತಮ್ಮ ರಾಜ್ಯಸಭಾ ಸ್ಥಾನದ ಅವಧಿ ಮುಗಿದ ಬಳಿಕ ಕೇಂದ್ರ ಸಚಿವ ಜಾರ್ಜ್ ಕುರಿಯನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕುರಿಯನ್ ಅವರು ಕೇಂದ್ರದ ಅಲ್ಪಸಂಖ್ಯಾತ ಸಚಿವಾಲಯ ಮತ್ತು ಮೀನುಗಾರಿಕೆ ಮತ್ತು ಪಶು ಸಂಗೋಪನೆ ಖಾತೆಯ ರಾಜ್ಯ ಸಚಿವರಾಗಿದ್ದರು. ಜೂ. 21ರಂದು ಕುರಿಯನ್ ಅವರ ರಾಜ್ಯಸಭಾ ಸ್ಥಾನದ ಅವಧಿ ಅಂತ್ಯಗೊಂಡಿತ್ತು. ಅವರನ್ನು ಮತ್ತೆ ಆಯ್ಕೆ ಮಾಡಲು ಬಿಜೆಪಿ ಆಸಕ್ತಿ ತೋರಿಸಲಿಲ್ಲ. ರೈಲ್ವೆ ಖಾತೆ ರಾಜ್ಯ ಸಚಿವರಾದ ರವನೀತ್ ಸಿಂಗ್ ರಾಜ್ಯಸಭಾ ಸ್ಥಾನದ ಅವಧಿ ಸಹ ಮುಗಿದಿದ್ದು, ಅವರನ್ನೂ ಮರು ಆಯ್ಕೆಗೆ ಪರಿಗಣಿಸಿಲ್ಲ.

ಮೇ 28 ರಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಹಾಗು ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ಅವರನ್ನು ದೆಹಲಿ ಬಿಜೆಪಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರನ್ನು ಬಿಜೆಪಿಯ ಉತ್ತರ ಪ್ರದೇಶ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಈ ನಡುವೆ, ಟಿಎಂಸಿಯ ಬಂಡಾಯ ಬಣದ ಸಂಸದರು ಮತ್ತು ಶಿವಸೇನಾದ ಕೆಲವರಿಗೂ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದೆ ಎಂದು ವರದಿ ತಿಳಿಸಿದೆ.

# ಪ್ರಥಮ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ ಯಶಸ್ವಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಭಾನುವಾರ ಏರ್ಪಡಿಸಿದ್ದ ಮೊದಲ ಚುಟುಕು ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನೆರವೇರಿತು.

ಸಾಹಿತ್ಯದ ಕಂಪನ್ನು ಪಸರಿಸುವ ಚೊಚ್ಚಲ ಸಮ್ಮೇಳನ ಕಲೆ, ಸಂಸ್ಕೃತಿಯನ್ನು ಪ್ರತಿಬಿಂಬಿಸಿತು. ಸಮ್ಮೇಳನಾಧ್ಯಕ್ಷೆ ಡಾ.ರತ್ನಹಾಲಪ್ಪಗೌಡರಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ರಾಜ್ಯ, ಹೊರರಾಜ್ಯದಿಂದ ಆಗಮಿಸಿದ್ದ ನೂರಾರು ಸಾಹಿತ್ಯ ಮನಸ್ಸುಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮೂಲಕ ಹಬ್ಬದ ವಾತಾವರಣ ಸೃಷ್ಟಿಸಿತ್ತು. ಹೇಮಾವತಿ ಪ್ರತಿಮೆ ಬಳಿಯಿಂದ ಎ.ವಿ.ಕೆ. ಕಾಲೇಜು ಸಭಾಂಗಣದವರೆಗೂ ಮೆರವಣಿಗೆ ಸಾಗಿತು.

ಶ್ರೀರಂಗಪಟ್ಟಣ ಚಂದ್ರವನ ಆಶ್ರಮದ ಪೀಠಾಧಿಪತಿ ಡಾ. ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು. ಭುವನೇಶ್ವರಿ ಭಾವಚಿತ್ರಕ್ಕೆ ಸಂಸದ ಶ್ರೇಯಸ್ ಎಂ.ಪಟೇಲ್



ಪುಷ್ಪಾರ್ಚನೆ ಮಾಡಿದರು. ಶಾಸಕ ಸ್ವರೂಪ್ ಅಧ್ಯಕ್ಷತೆ ವಹಿಸಿದ್ದರು.

**ವಿವಿಧ ಸಾಹಿತ್ಯ ಗೋಷ್ಟಿ**

ಎ.ವಿ.ಕೆ. ಕಾಲೇಜಿನ ಸಭಾಂಗಣದಲ್ಲಿ ಡಾ. ರತ್ನ ಹಾಲಪ್ಪಗೌಡ ಸರ್ವಾಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಚೊಚ್ಚಲ ಚುಟುಕು ಸಾಹಿತ್ಯ ಸಮ್ಮೇಳನದ ಅಂಗವಾಗಿ ಚುಟುಕು ಸಾಹಿತ್ಯ, ಬದುಕಿಗೆ ಲಾಲಿತ್ಯ ತಂಗಿಯ ತಲ್ಲಣ ಅಕ್ಕನ ಅಕ್ಕರೆ, ಸತ್ಯದ ಶೋಧ-ಸೌಂದರ್ಯದ ಸೃಷ್ಟಿ, ಬಹುಭಾಷಾ ಕವಿಗೋಷ್ಟಿ ಹೀಗೆ ಗಂಭೀರ ವಿಷಯಗಳ ಬಗ್ಗೆ ಏರ್ಪಡಿಸಿದ್ದ ಗೋಷ್ಟಿಗಳಲ್ಲಿ ಸಾಹಿತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಅರ್ಥಪೂರ್ಣವಾಗುವಂತೆ ಮಾಡಿದರು.

» ನಾಲ್ಕನೇ ಪುಟದಲ್ಲಿ

# ಯಾರಗೇನಹಳ್ಳಿ ಗೇಟ್ ಬಳಿ ಅಪಘಾತ: ಎಂಟು ಜನರಿಗೆ ಗಾಯ

• ಪ್ರಜೋದಯ ವರದಿ

**ಅರಸೀಕೆರೆ:** ಟಿಟಿ ವಾಹನ ಮತ್ತು ಕಾರಿನ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಚಾಲಕ ಸೇರಿ ಎಂಟು ಜನರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕಣಕಟ್ಟೆ ಹೋಬಳಿ ಯಾರಗೇನಹಳ್ಳಿ ಗೇಟ್ ಬಳಿ ನಡೆದಿದೆ.

ಅರಸೀಕೆರೆಯಿಂದ ಜೆ.ಸಿ.ಪುರ ಮಾರ್ಗವಾಗಿ ತೆರಳುತ್ತಿದ್ದ ಟಿಟಿ ವಾಹನಕ್ಕೆ ಎದುರು ಬಂದ ಕಾರು ಚಾಲಕ ಕಿರಿದಾದ ರಸ್ತೆಯ ತಿರುವನ್ನು ಸರಿಯಾಗಿ ಅಂದಾಜಿಸದೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ.

ಕಾರಿನಲ್ಲಿದ್ದ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಒಬ್ಬರ ಕಾಲು ಮುರಿದಿದೆ. ಗಾಯಾಳುಗಳಿಗೆ ನಗರದ ಸರ್ಕಾರಿ ಜೆ.ಸಿ. ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಮೂವರನ್ನು ಹಿಮ್ಸ್‌ಗೆ ರವಾನಿಸಲಾಗಿದೆ. ಟಿಟಿ ವಾಹನದಲ್ಲಿದ್ದ ಐವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತೆಲಂಗಾಣ ರಾಜ್ಯದ ಕಾರು ಅಪಘಾತಕ್ಕೀಡಾಗಿದ್ದು ಅದರಲ್ಲಿ ನಾಲ್ವರು ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ.

ಅರಸೀಕೆರೆ-ಹುಳಿಯಾರು



ಮಾರ್ಗವಾಗಿ ವಾಹನಗಳ ಪ್ರಮಾಣ ಹೆಚ್ಚಿರುತ್ತದೆ. ಪ್ರತಿದಿನ ಭಾರೀ ಪ್ರಮಾಣದ ಸರಕು ಹಾಗು ಇತರೆ ವಾಹನಗಳು ಸಂಚರಿಸುತ್ತಿವೆ. ರಸ್ತೆ ಕಿರಿದಾಗಿರುವುದು, ತಿರುವುಗಳ ಬಳಿ ರಸ್ತೆಯ ಅಂಚಿನವರೆಗೂ ಬೆಳೆದಿರುವ ಮರಗಳಿಂದ ದೃಶ್ಯತೆ ಕಡಿಮೆಯಾಗಿರುವುದು ಅಪಘಾತಗಳಿಗೆ ಪ್ರಮುಖ ಕಾರಣವಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ಈ ರಸ್ತೆಯಲ್ಲಿ ದೊಡ್ಡ ವಾಹನಗಳು ಏಕಕಾಲದಲ್ಲಿ ಎದುರು ಬಂದಾಗ ಪಕ್ಕಕ್ಕೆ ಸರಿಯಲು ಸಾಕಷ್ಟು ಅವಕಾಶವಿಲ್ಲದಿರುವುದರಿಂದ ಅಪಘಾತಗಳು ಹೆಚ್ಚುತ್ತಿವೆ. ರಸ್ತೆ ಅಗಲೀಕರಣ ಹಾಗು ವಾಹನ ಚಾಲಕರು ಸೀಟ್ ಬೆಲ್ಟ್ ಧರಿಸಿ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಕೈಕೊಟ್ಟ ಮುಂಗಾರು : ಬೆಳೆಕೈ ಕೊಡುವ ಆತಂಕದಲ್ಲಿ ಅನ್ನದಾತರು

- ರವಿ ದುಮ್ಮಿ


## ಹೊಗೆ ಸೊಪ್ಪು ಬೆಳೆಗೆ ರೋಗಬಾಧೆ | ಬಿತ್ತನೆಯಾಗದೆ ಉಳಿದ ಆಲೂಗೆಡ್ಡೆ

• ಪ್ರಜೋದಯ ವರದಿ

**ಅರಕಲಗೂಡು:** ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಸುರಿಯದ ಹಿನ್ನಲೆಯಲ್ಲಿ ತಾಲ್ಲೂಕಿನಾದ್ಯಂತ ಕೈಗೊಳ್ಳಲಾಗಿದ್ದ ವಿವಿಧ ಕೃಷಿ ಬೆಳೆಗಳು ಒಣಗ ತೊಡಗಿದ್ದು, ರೈತರು ಕಂಗಲಾಗಿದ್ದಾರೆ.

ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಗಳಾದ ತಂಬಾಕು 7 ಸಾವಿರ ಹೆಕ್ಟೇರ್, ಮೆಕ್ಕೆಜೋಳ 8 ಸಾವಿರ ಹೆಕ್ಟೇರ್ ಹಾಗು ಆಲೂಗೆಡ್ಡೆ 250 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಕಳೆದ ಒಂದು ವಾರದಿಂದ ಹೇಳಿ ಕೊಳ್ಳುವ ನಿಟ್ಟಿನಲ್ಲಿ ಮಳೆ ಬಿದ್ದಿಲ್ಲ. ಬಿಸಿಲಿನ ತಾಪ ಹೆಚ್ಚಿದ ಪರಿಣಾಮ ಮೊಳಕೆ ಒಡದಿರುವ ಆಲೂಗೆಡ್ಡೆ, ಮೆಕ್ಕೆಜೋಳ ಹಾಗು ತಂಬಾಕು ಗಿಡಗಳು ಸಂಪೂರ್ಣವಾಗಿ ಒಣಗ ತೊಡಗಿರುವುದು ಕಂಡು ಬಂದಿದೆ.

ಈ ಬಾರಿ ಪೂರ್ವ ಮುಂಗಾರು ಮಳೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಗಿಲ್ಲದ ಕಾರಣ ಆಲೂಗೆಡ್ಡೆ ಬಿತ್ತನೆಗೆ ತೀವ್ರ ಹಿನ್ನಡೆ ಉಂಟಾಗಿದೆ. ತಂಬಾಕು ಬಿತ್ತನೆ ಕೂಡ 11 ಸಾವಿರ ಹೆಕ್ಟೇರ್‌ನಲ್ಲಿ ಆಗಬೇಕಿತ್ತು. ಮಲೆನಾಡು ಪ್ರದೇಶವಾದ ಮಲ್ಲಿಪಟ್ಟಣ



ಹೋಬಳಿಯಲ್ಲಿಯೂ ಸಹ ಕಾಫಿ, ಏಲಕ್ಕಿ, ಕಾಳುಮೆಣಸು ಕೃಷಿಗೂ ಸಮಸ್ಯೆಯಾಗಿದೆ.

ತಾಲ್ಲೂಕಿನಲ್ಲಿ ಎರಡು ನದಿಗಳು ಹರಿಯುತ್ತಿದ್ದು, ನಾಲಾ ಅಚ್ಚುಕಟ್ಟು ಕೂಡ ಇದೆ. ಮಳೆಯಾಶ್ರಿತ ಪ್ರದೇಶ ಅಧಿಕ ಪ್ರಮಾಣದಲ್ಲಿದೆ. ಇತ್ತೀಚಿನ ಬದಲಾದ ನೈಸರ್ಗಿಕ ಹವಾಮಾನದ ಹಿನ್ನಲೆ ರೈತರು ಬೆಳೆ ಮಾಡಲು ಹರಸಹಾಸಪಡುವಂತಾಗಿದೆ.

**ಭರವಸೆ ಮೂಡಿಸಿದ ಅಂಗಾಶ ಕೃಷಿ**

ತಾಲ್ಲೂಕಿನ ಮೂರು ನರ್ಸರಿಗಳಲ್ಲಿ ಬಿತ್ತನೆ ಆಲೂಗೆಡ್ಡೆ ಅಂಗಾಶಶ ಕೃಷಿಯ ಸಸಿಗಳನ್ನು ಬೆಳೆಸಲಾಗುತ್ತಿದೆ. ಇದು ರೈತರಿಗೆ ಸದ್ಯದ ಪರಿಸ್ಥಿತಿಯ ಲಾಭದಾಯಕ ಪದ್ಧತಿಯಾಗಿದೆ. ಇದು ಜಮೀನಲ್ಲಿ ಆಲೂಗೆಡ್ಡೆ ಬಿತ್ತನೆ ಮಾಡಿ ಬೆಳೆಯುವ ಪದ್ಧತಿಯಲ್ಲ. ಬದಲಿಗೆ ಗುಣಮಟ್ಟದ ಸಸಿಗಳನ್ನು ಬೆಳೆಸಿ ಬಿತ್ತನೆ ಮಾಡುವ ರೈತರಿಗೆ ನೇರವಾಗಿ ಕೊಡಲಾಗುತ್ತಿದೆ. ನೇರ ವಾಗಿ ಹೊಲಕ್ಕೆ ಸಸಿಗಳನ್ನು ನಾಟಿ ಮಾಡಿ ಬೆಳೆಯನ್ನು ಪೋಷಣೆ ಮಾಡುವುದಾಗಿದೆ.

**ಬಿತ್ತನೆ ಪ್ರದೇಶ ಕುಸಿತ**

ತಾಲ್ಲೂಕಿನ ಐದು ಹೋಬಳಿ ವ್ಯಾಪ್ತಿಯ 2400 ಹೆಕ್ಟೇರ್ ಭೂಮಿಯಲ್ಲಿ 5 ವರ್ಷಗಳ ಹಿಂದೆ ಆಲೂಗೆಡ್ಡೆಯನ್ನು ಮುಖ್ಯ ವಾಣಿಜ್ಯ ಬೆಳೆಯಾಗಿ ರೈತರು ಕೈಗೊಳ್ಳುತ್ತಿದ್ದರು. ಕಳೆದ 5 ವರ್ಷಗಳ ಅವಧಿಯಲ್ಲಿ ಉಂಟಾದ ಅತಿವೃಷ್ಟಿ, ಅನಾವೃಷ್ಟಿ, ರೋಗಬಾಧೆ ಹಾಗು ಉತ್ತಮ ಬೆಲೆ ಸಿಗದಿರುವುದು, ಇಳುವರಿ ಕುಂಠಿತ ಪರಿಣಾಮ ಪ್ರಸ್ತುತ 1400 ಹೆಕ್ಟರ್‌ಗೆ ಕುಸಿತ ಕಂಡಿದೆ. ಆದರೆ, ಈ ಸಾಲಿನಲ್ಲಿ ಜೂನ್ ಎರಡನೇ ವಾರಕ್ಕೆ ಕಾಲಿಟ್ಟಿದ್ದರೂ ಮಳೆ ಬೀಳದ ಪರಿಣಾಮ ಕೇವಲ 250 ಹೆಕ್ಟರ್‌ನಲ್ಲಿ ಆಲೂಗೆಡ್ಡೆ ಬಿತ್ತನೆ ಆಗಿದೆ. ಮತ್ತೆ ಕೆಲವು ರೈತರು ಮಳೆ ಆಗದ ಪರಿ ಣಾಮ ಬಿತ್ತನೆ ಆಲೂಗೆಡ್ಡೆಯನ್ನು ಮನೆಯಲ್ಲಿ ಸಂಗ್ರಹ ಮಾಡಿಟ್ಟುಕೊಂಡು ಆಕಾಶದತ್ತ ನೋಡು ವಂತಾಗಿದೆ.

2018ನೇ ಸಾಲಿನಲ್ಲಿ ಜಿಲ್ಲಾಡಳಿತ ದೃಢೀಕೃತ ಆಲೂಗೆಡ್ಡೆ ಬಿತ್ತನೆ ಬೀಜವನ್ನು ಶೇ.50ರ ರಿಯಾಯಿತಿ ದರದಲ್ಲಿ ನೀಡಿ, ಬೇಕಾದ ಔಷಧ ಕೂಡ ತೋಟಗಾರಿಕೆ ಇಲಾಖೆ ಮೂಲಕ ವಿತರಣೆ ಮಾಡಿತ್ತು. ಈ ಅವಧಿಯಲ್ಲಿ ನಿರೀಕ್ಷಿತ ಬೆಲೆ, ಇಳುವರಿಯನ್ನು ಬಹುತೇಕ ರೈತರು ಪಡೆದು ಮುಂದಿನ ಸಾಲಿನ ಬೆಳೆಯತ್ತಾ ಆಶಾದಾಯಕ ನಿಲುವು ಹೊಂದಿದ್ದರು. ನಂತರದ ವರ್ಷಗಳಲ್ಲಿ ಬೆಳೆ ಬರಲಿಲ್ಲ, ಬೆಲೆಯೂ ಸಹ ಸಿಗಲಿಲ್ಲ. ಆದರಿಂದ ಬೆಳೆ ಮಾಡುವತ್ತ ರೈತರು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ.

**ಹೊಗೆ ಸೊಪ್ಪು ಬೆಳೆಗೆ ರೋಗಬಾಧೆ**

ಪೂರ್ವ ಮುಂಗಾರು ಮಳೆ ಮೇ ತಿಂಗಳ ಆರಂಭದಲ್ಲಿ ಬಿದ್ದ ಪರಿಣಾಮ 7 ಸಾವಿರ ಹೆಕ್ಟೇರ್‌ನಲ್ಲಿ ಹೊಗೆ ಸೊಪ್ಪು ಬಿತ್ತನೆಯಾಗಿದೆ. ಒಂದು ತಿಂಗಳ ಬೆಳೆ ಇದಾಗಿದೆ. ನೀರಾವರಿ ಮೂಲದವರು ಗಿಡ ಉಳಿಸಿಕೊಳ್ಳಲು ರಾತ್ರಿ ಹಗಲು ಶ್ರಮಪಡುತಿದ್ದರೇ ಮಳೆಯನ್ನು ನೆಚ್ಚಿ ಕೊಂಡಿರುವ ರೈತರು ಆಕಾಶಕ್ಕೆ ಮುಖಮಾಡಿ ಮಳೆರಾಯನ ಕೃಪೆಗೆ ಪ್ರಾರ್ಥಿಸುತ್ತಿದ್ದಾರೆ. ಬಹುತೇಕ ಮಂದಿ ಮಳೆಯ ಆಶ್ರಯದಲ್ಲಿ ತಂಬಾಕು ಬಿತ್ತನೆ ಕೈಗೊಂಡಿದ್ದಾರೆ. ಮಳೆ ಬೀಳದ ಪರಿಣಾಮ ಈ ಭಾಗದ ಬೆಳೆ ರೋಗಕ್ಕೆ ತುತ್ತಾಗುತ್ತಿದೆ. ಅಲ್ಲದೆ ಬಿಸಿಲಿನ ತಾಪಕ್ಕೆ ಒಣಗುತ್ತಿರುವುದು ಕಂಡುಬಂದಿದೆ. ಒಂದೆರಡು ದಿನಗಳಲ್ಲಿ ಮಳೆ ಬೀಳದೆ ಹೋದರೆ ಬೆಳೆಗಳನ್ನು ರೈತ ಕಾಪಾಡಿಕೊಳ್ಳಲು ಸಾಧ್ಯವಾಗದೇ ಸಂಕಷ್ಟಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ.

> **ಮಳೆ ನಂಬಿ ಕೃಷಿಯನ್ನು ಬಹುತೇಕ ರೈತರು ಕೈಗೊಳ್ಳುತ್ತಿದ್ದಾರೆ. ಬಿದ್ದ ಮಳೆಗೆ ಜೋಳ, ತಂಬಾಕು, ಆಲೂಗೆಡ್ಡೆ ಬಿತ್ತನೆಯನ್ನು ಕೈಗೊಳ್ಳಲಾಗಿದೆ. ಭೂಮಿ ಮಳೆಯನ್ನು ಕಾಣದೆ ಹೆಚ್ಚಿನ ತಾಪಮಾನಕ್ಕೆ ಒಳಗಾಗಿದೆ. ಈ ಪರಿಣಾಮ ಈಗಾಗಲೇ ಕೈಗೊಂಡಿರುವ ಬೆಳೆಗಳು ಒಣಗತೊಡಗಿವೆ. ಈ ಹಂತದಲ್ಲಿ ಮಳೆ ಬಿದ್ದರೂ ಕೂಡ ಉತ್ತಮ ಬೆಳೆ ನಿರೀಕ್ಷೆ ಮಾಡಲು ಸಾಧ್ಯವಾಗದು.**
> **-ಶ್ರೀನಿವಾಸಗೌಡ, ಹೆತ್ತಗೌಡನಹಳ್ಳಿ ರೈತ**

> **ತಾಲ್ಲೂಕಿನಲ್ಲಿ ಇದುವರೆಗೆ 250 ಹೆಕ್ಟೇರ್‌ನಲ್ಲಿ ಆಲೂಗೆಡ್ಡೆ ಬಿತ್ತನೆ ನಡೆದಿದೆ. ಹಲವು ಗ್ರಾಮಗಳಲ್ಲಿ ರೈತರು ಬಿತ್ತನೆ ಬೀಜವನ್ನು ಇಟ್ಟು ಕೊಂಡು ಮಳೆಗಾಗಿ ಕಾಯುತ್ತಿದ್ದಾರೆ. ಮಳೆ ವಿಳಂಬವಾದರೆ ಆಲೂಗೆಡ್ಡೆ ಬಿತ್ತನೆ ಪ್ರದೇಶ ಕುಸಿಯುವ ಆತಂಕವಿದೆ. ಆಲೂಗೆಡ್ಡೆ ಬಿತ್ತನೆ, ಬೆಳೆಗಾರರಿಗೆ ಸಹಾಯಧನವನ್ನು ಸರ್ಕಾರ ಘೋಷಿಸಿಲ್ಲ. ಮತ್ತೆ ಕೆಲವು ರೈತರು ಅಂಗಾಂಶ ಕೃಷಿಯತ್ತ ಮುಂದಾಗಿರುವುದು ಸಹ ಕಂಡುಬದಿದೆ.**
> **-ರಾಜೇಶ್, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ**

# ಜಿಲ್ಲೆಯ ಪತ್ರಕರ್ತರ ಒಗ್ಗಟ್ಟು ರಾಜ್ಯಕ್ಕೆ ಮಾದರಿ

## ಸಂಸದ ಶ್ರೇಯಸ್ ಪಟೇಲ್ ಮೆಚ್ಚುಗೆ | ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಒಗ್ಗಟ್ಟು ಇಡೀ ರಾಜ್ಯಕ್ಕೆ ಮಾದರಿ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಿಕಾ ದಿನಾಚರಣೆ ಅಂಗವಾಗಿ ನಗರದ ಸರ್ಕಾರಿ ವಿಜ್ಞಾನ ಕಾಲೇಜಿನ ಟರ್ಫ್ ಮೈದಾನದಲ್ಲಿ ಭಾನುವಾರ ನಡೆದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ಜನಪ್ರತಿನಿಧಿ ಆಗುವುದಕ್ಕಿಂತ



ಮೊದಲಿನಿಂದಲೂ ಜಿಲ್ಲೆಯ ಪತ್ರಕರ್ತರನ್ನು ಹತ್ತಿರದಿಂದ ಕಂಡಿದ್ದೇನೆ. ಪರಸ್ಪರ ಸೌಹಾರ್ದತೆ, ಸಹಬಾಳ್ವೆ ಹಾಗು ಉತ್ತಮ ಚಿಂತನೆಗಳ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇ ಯಾದ ಕೊಡುಗೆ ನೀಡುತ್ತಿದ್ದಾರೆಂದರು.

» ನಾಲ್ಕನೇ ಪುಟದಲ್ಲಿ

# ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಹಾಸನ:** ವ್ಯಾನಿಟಿ ಬ್ಯಾಗ್‌ನಲ್ಲಿದ್ದ 50 ಗ್ರಾಂ ತೂಕದ ಚಿನ್ನದ ಸರ ಕಳವು ಮಾಡಿರುವ ಘಟನೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಶನಿವಾರ ನಡೆದಿದೆ. ಕೆಹೆಚ್‌ಬಿ ಕಾಲೋನಿ ನಿವಾಸಿ ಭಾಗ್ಯ ಅವರ ಸರ ಕಳುವಾಗಿದೆ. ಚನ್ನ ರಾಯಪಟ್ಟಣದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ತೆರಳಿದ್ದ ಅವರು ವಾಪಾಸ್ ಬರುತ್ತಿದ್ದಾಗ ಶಾಂತಿಗ್ರಾಮದಲ್ಲಿ ಬಸ್ ಹತ್ತಿದ ಅಪರಿಚಿತ ಮಹಿಳೆ ಮಾಂಗಲ್ಯ ಸರ ತುಂಡಾಗಿದೆ ನೋಡಿ ಎಂದು ಹೇಳಿದಾಗ ಭಾಗ್ಯ ಅವರು ಸರವನ್ನು ತೆಗೆದು ವ್ಯಾನಿಟಿ ಬ್ಯಾಗ್‌ಗೆ ಹಾಕಿದ್ದರು. ಎನ್.ಆರ್.ವೃತ್ತದಲ್ಲಿ ಬಸ್ ಇಳಿದು ಬ್ಯಾಗ್ ಪರಿಶೀಲಿಸಿದಾಗ ಚಿನ್ನದ ಸರ ಮಾಯವಾಗಿದೆ. ಶಾಂತಿಗ್ರಾಮದಲ್ಲಿ ಬಸ್ ಹತ್ತಿದ ಮಹಿಳೆಯೇ ಗಮನ ಬೇರೆಡೆ ಸೆಳೆದು ಸರ ಕದ್ದಿದ್ದಾರೆಂದು ಭಾಗ್ಯ ಅವರು ಸಂಶಯ ವ್ಯಕ್ತಪಡಿಸಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯೋಗದಿಂದ ಆರೋಗ್ಯ-ಆತ್ಮವಿಶ್ವಾಸ ವೃದ್ಧಿ: ಶಂಭುನಾಥ ಶ್ರೀ

• ಪ್ರಜೋದಯ ವರದಿ

**ಹಾಸನ:** ಯೋಗವು ಭಾರತದ ಪ್ರಾಚೀನ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿ, ಏಕಾಗ್ರತೆ, ಆತ್ಮವಿಶ್ವಾಸ ಹಾಗು ಶಿಸ್ತು ಬೆಳೆಸುವ ಶಕ್ತಿಯನ್ನು ಹೊಂದಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ವಿಶ್ವ ಯೋಗ ದಿನಾಚರಣೆ ಅಂಗವಾಗಿ ಜಿಲ್ಲಾ ಯೋಗ ಸಂಸ್ಥೆ ವತಿಯಿಂದ ನಗರದ ಆದಿಚುಂಚನಗಿರಿ ಮಠದಲ್ಲಿ ಆಯೋಜಿಸಿದ್ದ 6ನೇ



ವರ್ಷದ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಯಾಂತ್ರಿಕ ಹಾಗು ಒತ್ತಡದ ಜೀವನದಲ್ಲಿ ಮಕ್ಕಳು ಮತ್ತು ಯುವಕರು ಯೋಗಾಭ್ಯಾಸವನ್ನು ಬದುಕಿನ ಭಾಗವಾಗಿಸಿಕೊಳ್ಳಬೇಕು. ಮೊಬೈಲ್, ಕಂಪ್ಯೂಟರ್ ಸೇರಿ

» ನಾಲ್ಕನೇ ಪುಟದಲ್ಲಿ

# ಅವಳಿ ಮಕ್ಕಳಿಗೆ ಪೋಲಿಯೋ ಹನಿ: ಅಭಿಯಾನಕ್ಕೆ ಸಂಸದ ಶ್ರೇಯಸ್ ಚಾಲನೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಂಸದ ಶ್ರೇಯಸ್ ಅವರು ಭಾನುವಾರ ತಮ್ಮ ಅವಳಿ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಭಾರತವನ್ನು ಶಾಶ್ವತವಾಗಿ ಪೋಲಿಯೋ ಮುಕ್ತ ರಾಷ್ಟ್ರವಾಗಿ ಉಳಿಸಿಕೊಳ್ಳಬೇಕು. ತಾಲ್ಲೂಕಿನ 90 ಕೇಂದ್ರಗಳಲ್ಲಿ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದ್ದು, ಮುಂದಿನ ಮೂರು ದಿನಗಳ ಕಾಲ ಆರೋಗ್ಯ ಇಲಾಖೆ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಲಸಿಕೆ ನೀಡಲಿದ್ದಾರೆ. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಪೋಷಕರು ಆರೋಗ್ಯ ಇಲಾಖೆ ಯೊಂದಿಗೆ ಸಹಕರಿಸಬೇಕೆಂದರು. ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ|| ಮಂಜುಳಾ, ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ರಾಜೇಶ್, ಡಾ|| ನಟರಾಜ್, ಡಾ|| ರಾಮು, ಡಾ|| ಸೆಲ್ವಕುಮಾರ್, ಡಾ|| ಲೋಕೇಶ್, ಡಾ|| ಭವ್ಯಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ. ಲಕ್ಷ್ಮಣ್, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸ್ವಯಂ ಸೇವಕರು ಭಾಗವಹಿಸಿದ್ದರು.

## ಜಿಲ್ಲಾದ್ಯಂತ ಲಸಿಕೆ ಅಭಿಯಾನ | ಶೇ.100 ಗುರಿ ಸಾಧನೆಗೆ ಸೂಚನೆ

# ಪೋಲಿಯೋ ಹನಿ ಮಕ್ಕಳ ಜೀವಕ್ಕೆ ಆರೋಗ್ಯ ರಕ್ಷೆ : ಸಂಸದ ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ಎರಡು ಹನಿ ಪೋಲಿಯೋ ಲಸಿಕೆ ಮಕ್ಕಳ ಜೀವನದ ಆರೋಗ್ಯ ರಕ್ಷೆಯಾಗಿದೆ. 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೇ ಲಸಿಕೆ ಹಾಕಿಸುವ ಮೂಲಕ ಪೋಲಿಯೋ ಮುಕ್ತ ಭಾರತ ನಿರ್ಮಾಣ ಮಾಡುವುದು ಎಲ್ಲರ ಆದ್ಯ ಕರ್ತವ್ಯವೆಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ನಗರದ ಹಿಮ್ಸ್‌ನ ಮಹಿಳಾ ಮತ್ತು ಮಕ್ಕಳ (ಎಂ.ಸಿ.ಹೆಚ್.) ಆಸ್ಪತ್ರೆಯಲ್ಲಿ ಭಾನುವಾರ ನಡೆದ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದ ಅವರು, ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ಪ್ರತಿ ಮನೆಗೆ ಭೇಟಿ ನೀಡಿ ಲಸಿಕೆಯನ್ನು ಕಡ್ಡಾಯವಾಗಿ ಹಾಕಬೇಕು. ಜನಪ್ರತಿನಿಧಿಗಳು, ಅಧಿಕಾರಿಗಳು ಪೋಲಿಯೋ ಲಸಿಕೆಯ ಬಗ್ಗೆ ಪೋಷಕರಿಗೆ ಮಾಹಿತಿ ನೀಡಬೇಕೆಂದರು.



ಪೋಲಿಯೋ ಅಭಿಯಾನ ಯಶಸ್ವಿಗಾಗಿ ಜಿಲ್ಲೆಯಲ್ಲಿ 1744 ತಂಡಗಳನ್ನು ಮಾಡಲಾಗಿದ್ದು, ಪೋಲಿಯೋ ಲಸಿಕೆಗೆ 3488 ಆರೋಗ್ಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಜಿಲ್ಲೆಯಲ್ಲಿ ಶೇ.99 ರಷ್ಟು ಪೋಲಿಯೋ ಲಸಿಕೆಯನ್ನು ಹಾಕಿ ಸುವ ಮೂಲಕ ಯಶಸ್ಸು ಕಂಡಿದ್ದು, ಈ ಬಾರಿಯೂ ಶೇ.100 ರಷ್ಟು ಪೋಲಿಯೋ ಲಸಿಕೆ ಹಾಕಿಸಬೇಕೆಂದರು.

ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅವರು ಮಾತನಾಡಿ, ಭಾರತವನ್ನು ಪೋಲಿಯೋ ಮುಕ್ತ ದೇಶವಾಗಿ ಘೋಷಿಸಲಾಗಿದೆ. ಆದರೆ, ಇತರ ದೇಶಗಳಿಂದ ವಲಸೆ ಬರುವ ಜನರಿಂದ ಹರಡಬಹುದಾದ ಪೋಲಿಯೋ ಖಾಯಿಲೆಗೆ ಮುನ್ನೆಚ್ಚರಿಕಾ ಕ್ರಮವಾಗಿ ಪೋಲಿಯೋ ಕಾರ್ಯಕ್ರಮವನ್ನು ದೇಶದಾದ್ಯಂತ ನಡೆಸುತ್ತಿದ್ದು,ಜಿಲ್ಲೆಯ ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಎರಡು ಹನಿ ಲಸಿಕೆ ಹಾಕಿಸಬೇಕೆಂದು ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 1,05,536 ಐದು ವರ್ಷದೊಳಗಿನ ಮಕ್ಕಳಿದ್ದು, ಪೋಲಿಯೋ ಲಸಿಕೆಯಿಂದ ಯಾರೂ ವಂಚಿತರಾಗದಂತೆ ಕ್ರಮವಹಿಸಬೇಕು. ಜಿಲ್ಲಾದ್ಯಂತ 872 ಬೂತ್ ಸ್ಥಾಪಿಸಲಾಗಿದೆ, 3,584 ವ್ಯಾಕ್ಸಿನೆಟರ್‌ಗಳನ್ನು ನೇಮಕ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮೂರು ದಿನ ಹಾಗು ನಗರ ಪ್ರದೇಶಗಳಲ್ಲಿ ನಾಲ್ಕು ದಿನ ಲಸಿಕಾ ಕಾರ್ಯಕ್ರಮ ನಡೆಯುವುದರಿಂದ ಪೋಷಕರು ಗಮನ ವಹಿಸಿ ಮಕ್ಕಳಿಗೆ ಲಸಿಕೆಯನ್ನು ತಪ್ಪದೇ ಹಾಕಿಸಬೇಕೆಂದು ತಿಳಿಸಿದರು.

ಆರೋಗ್ಯ ಸಿಬ್ಬಂದಿ ವರ್ಗದವರು ಪ್ರತಿ ಮನೆಗೆ ಭೇಟಿ ನೀಡಿ ಲಸಿಕೆ ಹಾಕುವ ಉದ್ದೇಶದಿಂದ 1744 ತಂಡಗಳನ್ನು ರಚಿಸಿ 179 ಮೇಲ್ವಿಚಾರಕರ ನೇಮಿಸಲಾಗಿದೆ. 8 ಸಂಚಾರಿ ತಂಡಗಳನ್ನು ನೇಮಕ ಮಾಡಲಾಗಿದ್ದು, 187 ವಾಹನಗಳನ್ನು ಜಿಲ್ಲೆಯಾದ್ಯಂತ ಸಂಚಾರ ಮಾಡಿ ಪೋಲಿಯೋ ಲಸಿಕೆ ಹಾಕಿಸಲು ನಿಯೋಜನೆ ಮಾಡಲಾಗಿದೆ, ಈ ಬಾರಿ ಶೇ.ನೂರರಷ್ಟು ಗುರಿ ಸಾಧಿಸಲು ಶ್ರಮವಹಿಸಿ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲ ಅವರು ಮಾತನಾಡಿ, ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಲಸಿಕೆ ಹಾಕಿಸುವ ಮೂಲಕ ಮಕ್ಕಳ ಆರೋಗ್ಯವನ್ನು ಕಾಪಾಡಿ ಎಂದು ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಹಿಮ್ಸ್ ನಿರ್ದೇಶಕ ಡಾ|| ರಾಜಣ್ಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶನಾಲಯದ ನಿರ್ದೇಶಕಿ ರಜಿನಿ, ಡಾ|| ನಾಗೇಶ್ ಆರಾಧ್ಯ ಇತರರಿದ್ದರು.

# ದೇವಾಲಯ ಹುಂಡಿ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇವಾಲಯದ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 400 ಗ್ರಾಂ ತೂಕದ ಬೆಳ್ಳಿ ಆಭರಣ ಹಾಗು ಅಂದಾಜು 10 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಅಗ್ರಹಾರ ಗ್ರಾಮದಲ್ಲಿ ನಡೆದಿದೆ.

ಶ್ರೀ ಅಣ್ಣಪ್ಪ ದೇವಸ್ಥಾನದಲ್ಲಿ ಜೂ. 26ರ ರಾತ್ರಿ ಕಳ್ಳತನವಾಗಿದೆ. ಜೂ. 27ರ ಬೆಳಿಗ್ಗೆ ಪೂಜೆ ಮಾಡಲು ಅರ್ಚಕರು ದೇವಸ್ಥಾನಕ್ಕೆ ಹೋದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಗರ್ಭಗುಡಿಯ ಒಳಗೆ ಇಟ್ಟಿದ್ದ ತಾಮ್ರದ ಬಿಂದಿಗೆಯಂತಿರುವ ಹುಂಡಿ ಹಾಗು ಮತ್ತೊಂದು ಸ್ಟೀಲ್ ಹುಂಡಿ, ದೇವರ ತಲೆಯ ಮೇಲೆ ಹಾಕಿದ್ದ ಬೆಳ್ಳಿಯ ನಾಗರ ಮತ್ತು ಕಿರೀಟ ಕಳವು ಮಾಡಿದ್ದಾರೆ. ಹುಂಡಿಯಲ್ಲಿ ಅಂದಾಜು 10 ಸಾವಿರ ರೂ., ಕಳುವಾಗಿರುವ ಬೆಳ್ಳಿ ಸಾಮಾಗ್ರಿ, 400 ಗ್ರಾಂ ತೂಕ ಹೊಂದಿತ್ತು ಎನ್ನಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CMYK CMYK CMYK CMYK

# ಭಾವ ಲಹರಿ

ಇಂಗ್ಲಿಷ್ ಫಾಂಟ್‌ಗಳ ಪ್ರಪಂಚ ನಿಜಕ್ಕೂ ಒಂದು ಮಹಾಸಾಗರ. ಇಲ್ಲಿ ಲಕ್ಷಾಂತರ ಅಕ್ಷರ ಶೈಲಿಗಳಿವೆ ಮತ್ತು ನೀವು ಹೇಳಿದಂತೆ, ಪ್ರತಿಯೊಂದು ಫಾಂಟ್‌ನ ಹಿಂದೆಯೂ ಒಬ್ಬ ವಿನ್ಯಾಸಕನ ಕಠಿಣ ಪರಿಶ್ರಮ, ಐತಿಹಾಸಿಕ ಹಿನ್ನೆಲೆ ಹಾಗೂ ರೋಚಕ ಕಥೆಗಳಿವೆ. ಇಂಗ್ಲಿಷ್ ಟೈಪೋಗ್ರಫಿಯ ಇತಿಹಾಸವನ್ನು ಬದಲಿಸಿದ ಮತ್ತು ಜಗತ್ತಿನಾದ್ಯಂತ ಸದ್ದು ಮಾಡಿದ ಕೆಲವು ಫಾಂಟ್‌ಗಳಿವೆ. ಆ ಪೈಕಿ ಟೈಮ್ಸ್‌ನ್ಯೂ ರೋಮನ್ ಮುಖ್ಯವಾದುದು. ಟೈಮ್ಸ್ ನ್ಯೂ ರೋಮನ್ ಮುದ್ರಣ ಮತ್ತು ಡಿಜಿಟಲ್ ಲೋಕದ ದೈತ್ಯ ಸಾಮ್ರಾಟ.

## ಅಕ್ಷರಲೋಕದ ಆತ್ಮಸಂಗೀತವೂ, ಫಾಂಟ್‌ಗಳ ವಿಶಿಷ್ಟ ಲೋಕವೂ!




ಇದೇ ಅಂತರಂಗ ಸುದ್ದಿ. ನನಗೆ ಫಾಂಟ್‌ಗಳೆಂದರೆ ಬಹಳ ಇಷ್ಟ. ಅದು ಕನ್ನಡ ಅಥವಾ ಇಂಗ್ಲಿಷ್ ಅಕ್ಷರಗಳಾಗಿರಬಹುದು, ನಾನು ಅಕ್ಷರ ಶೈಲಿಯನ್ನು ಅವುಗಳನ್ನು ನೋಡುತ್ತಾ ಕುಳಿತು ಬಿಡುತ್ತೇನೆ. ಅವುಗಳ ವಿನ್ಯಾಸದ ಬಗ್ಗೆ ರೋಮಾಂಚಿತನಾಗುತ್ತೇನೆ. ಕೆಲವು ಸಲ ನನಗೆ ಅವುಗಳನ್ನು ನೋಡುವುದನ್ನು ಬಿಟ್ಟು ಮುಂದೆ ಓದಲು ಸಾಧ್ಯವಾಗುವುದಿಲ್ಲ.

ಫಾಂಟ್‌ಗೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದೂ ಇಷ್ಟವೇ. ಫಾಂಟ್ ಬಗ್ಗೆ ಆಸಕ್ತಿ ಇರುವ ವ್ಯಕ್ತಿಗಳು ಸಿಕ್ಕರಂತೂ ಮುಗಿದೇ ಹೋಯಿತು. ಆ ವಿಷಯ ಬಿಟ್ಟು ಬೇರೆಡೆ ಕದಲಲು ಮನಸ್ಸಾಗುವುದಿಲ್ಲ. ಗ್ರಾಫಿಕ್ ಡಿಸೈನಿಂಗ್ ಲೋಕದಲ್ಲಿ ಇದಕ್ಕೆ ಒಂದು ಸುಂದರವಾದ ಹೆಸರಿದೆ– ಟೈಪೋ ಫಿಲಿಯಾ. ಅಂದರೆ ಅಕ್ಷರಶೈಲಿ ಅಥವಾ ಫಾಂಟ್‌ಗಳ ಮೇಲೆ ಇರುವ ತೀವ್ರವಾದ ವ್ಯಾಮೋಹ. ಅಕ್ಷರಗಳ ಶಾಸ್ತ್ರೀಯ ಅಧ್ಯಯನಕ್ಕೆ ಟೈಪೋಗ್ರಫಿ ಅಂತಾರೆ.

ಫಾಂಟ್ ಅಥವಾ ಅಕ್ಷರಶೈಲಿ ಎಂಬುದು ಕೇವಲ ಕಣ್ಣಿಗೆ ಕಾಣುವ ಚಿತ್ರವಲ್ಲ. ಅದು ಭಾಷೆಗೆ ಜೀವ ನೀಡುವ ಕಲೆ. ನಾವು ದಿನಾಲೂ ಸ್ಮಾರ್ಟ್‌ಫೋನ್‌ಗಳು, ಪುಸ್ತಕಗಳು, ಪತ್ರಿಕೆಗಳು ಮತ್ತು ಜಾಹೀರಾತುಗಳಲ್ಲಿ ಸಾವಿರಾರು ಅಕ್ಷರಗಳನ್ನು ನೋಡುತ್ತೇವೆ. ಆದರೆ ಅವುಗಳ ಹಿಂದೆ ಒಂದು ರೋಚಕ ಇತಿಹಾಸ, ವಿಜ್ಞಾನ ಮತ್ತು ಮಾನಸಿಕ ಪ್ರಭಾವ ಅಡಗಿದೆ. ನಾವು ಇಂದು ಬಳಸುವ ಫಾಂಟ್‌ಗಳ ಹಿಂದೆ ಶತಮಾನಗಳ ಇತಿಹಾಸವಿದೆ. ಹದಿನೈದನೇ ಶತಮಾನದಲ್ಲಿ ಜೊಹಾ ಗುಟೆನ್ ಬರ್ಗ್ ಮುದ್ರಣ ಯಂತ್ರವನ್ನು ಕಂಡುಹಿಡಿದಾಗ, ಮೊಟ್ಟಮೊದಲ ಬಾರಿಗೆ ಬ್ಲ್ಯಾಕ್ ಲೇಟರ್ ಎಂಬ ಫಾಂಟ್ ಶೈಲಿಯನ್ನು ಬಳಸಿದ. ಅದು ಅಂದಿನ ಕೈಬರಹವನ್ನು ಹೋಲುತ್ತಿತ್ತು.

ಇಂಗ್ಲಿಷ್ ಫಾಂಟ್‌ಗಳ ಪ್ರಪಂಚ ನಿಜಕ್ಕೂ ಒಂದು ಮಹಾಸಾಗರ. ಇಲ್ಲಿ ಲಕ್ಷಾಂತರ ಅಕ್ಷರ ಶೈಲಿಗಳಿವೆ ಮತ್ತು ನೀವು ಹೇಳಿದಂತೆ, ಪ್ರತಿಯೊಂದು ಫಾಂಟ್‌ನ ಹಿಂದೆಯೂ ಒಬ್ಬ ವಿನ್ಯಾಸಕನ ಕಠಿಣ ಪರಿಶ್ರಮ, ಐತಿಹಾಸಿಕ ಹಿನ್ನೆಲೆ ಹಾಗೂ ರೋಚಕ ಕಥೆಗಳಿವೆ. ಇಂಗ್ಲಿಷ್ ಟೈಪೋಗ್ರಫಿಯ ಇತಿಹಾಸವನ್ನು ಬದಲಿಸಿದ ಮತ್ತು ಜಗತ್ತಿನಾದ್ಯಂತ ಸದ್ದು ಮಾಡಿದ ಕೆಲವು ಫಾಂಟ್‌ಗಳಿವೆ. ಆ ಪೈಕಿ ಟೈಮ್ಸ್‌ನ್ಯೂ ರೋಮನ್ ಮುಖ್ಯವಾದುದು. ಟೈಮ್ಸ್ ನ್ಯೂ ರೋಮನ್ ಮುದ್ರಣ ಮತ್ತು ಡಿಜಿಟಲ್ ಲೋಕದ ದೈತ್ಯ ಸಾಮ್ರಾಟ.

ಸ್ಟ್ಯಾನ್ಲಿ ಮಾರಿಸನ್ ಮತ್ತು ವಿಕ್ಟರ್ ಲಾರ್ಡೆಂಟ್ ಜಂಟಿಯಾಗಿ ಸೃಷ್ಟಿಸಿದ ಈ ಅಕ್ಷರ ಶೈಲಿಯ ಹಿಂದೆ ನಾವೆಲ್ಲರೂ ಬೆರಗಾಗುವ ಹಲವು ಸ್ವಾರಸ್ಯಕರ ಸಂಗತಿಗಳಿವೆ. ಈ ಫಾಂಟ್ ಹುಟ್ಟಲು ಪ್ರಮುಖ ಕಾರಣ ಸ್ಟ್ಯಾನ್ಲಿ ಮಾರಿಸನ್ ಅವರ ನೇರ ನಡೆ ನುಡಿ. 1929ರಲ್ಲಿ ಆತ ಲಂಡನ್‌ನ ಪ್ರಸಿದ್ಧ ದಿ ಟೈಮ್ಸ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದ. ಅದರಲ್ಲಿ, ನಿಮ್ಮ ಪತ್ರಿಕೆಯ ಮುದ್ರಣ ತೀರಾ ಕಳಪೆಯಾಗಿದ್ದು ಬಳಸುತ್ತಿರುವ ಫಾಂಟ್ ಅತಿ ಹಳೆಯದಾಗಿದೆ ಎಂದು ಬಹಿರಂಗವಾಗಿಯೇ ಬೈದಿದ್ದ. ಇದರಿಂದ ಪ್ರಭಾವಿತರಾದ ಪತ್ರಿಕೆಯ ಮ್ಯಾನೇಜ್‌ಮೆಂಟ್, ಹಾಗಾದರೆ ನೀವೇ ನಮಗೊಂದು ಹೊಸ ಫಾಂಟ್ ಸೃಷ್ಟಿಸಿ ಕೊಡಿ ಎಂದು ಸವಾಲು ಹಾಕಿ ಅವರನ್ನು ಕೆಲಸಕ್ಕೆ ನೇಮಿಸಿಕೊಂಡಿತು.

ಅಂದಿನ ಕಾಲದಲ್ಲಿ ಪತ್ರಿಕೆಗಳ ಕಾಗದದ ಬೆಲೆ ದುಬಾರಿಯಾಗಿತ್ತು. ಹೀಗಾಗಿ, ಕಡಿಮೆ ಜಾಗದಲ್ಲಿ ಹೆಚ್ಚು ಸುದ್ದಿಗಳನ್ನು ತುಂಬಬೇಕಾದ ಅನಿವಾರ್ಯತೆ ಇತ್ತು. ಮಾರಿಸನ್ ಅಕ್ಷರಗಳ ಅಗಲವನ್ನು ಕೊಂಚ ಕಡಿಮೆ ಮಾಡಿ, ಎತ್ತರವನ್ನು ಹಾಗೇ ಉಳಿಸಿಕೊಂಡ. ಇದರಿಂದಾಗಿ ಪುಟದ ಜಾಗ ಉಳಿಯಿತಾದರೂ, ಅಕ್ಷರಗಳು ಒಂದಕ್ಕೊಂದು ಅಂಟಿಕೊಂಡಂತೆ ಕಾಣದೆ ಓದಲು ಅತ್ಯಂತ ಆರಾಮದಾಯಕವಾಗಿದ್ದವು. ಜಾಗ ಉಳಿಸುವ ಈ ಜಿಪುಣತನದ ವಿನ್ಯಾಸವೇ ಮುಂದೆ ಈ ಫಾಂಟ್‌ನ ಯಶಸ್ಸಿನ ಸೂತ್ರವಾಯಿತು.

ಅಚ್ಚರಿಯ ವಿಷಯವೆಂದರೆ, ಈ ಫಾಂಟ್ ಅನ್ನು ತನ್ನ ಸ್ವಂತ ಬಳಕೆಗೆ ಮಾತ್ರ ಸೃಷ್ಟಿಸಿಕೊಂಡಿದ್ದ ದಿ ಟೈಮ್ಸ್ ಪತ್ರಿಕೆ, ಇದರ ಮೇಲಿನ ಸಂಪೂರ್ಣ ಹಕ್ಕುಸ್ವಾಮ್ಯವನ್ನು ತನ್ನ ಬಳಿ ಉಳಿಸಿಕೊಳ್ಳಲಿಲ್ಲ. ಕೇವಲ ಒಂದು ವರ್ಷದ ನಂತರ, ಇದನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಯಿತು. ಇಷ್ಟೊಂದು ಅದ್ಭುತ ಫಾಂಟ್ ಉಚಿತವಾಗಿ ಸಿಕ್ಕಾಗ ಜಗತ್ತಿನ ಇನ್ನುಳಿದ ಪತ್ರಿಕೆಗಳು ಮತ್ತು ಪ್ರಕಾಶಕರು ಮುಗಿಬಿದ್ದು ಇದನ್ನು ಬಳಸಲಾರಂಭಿಸಿದರು.

ಕಂಪ್ಯೂಟರ್ ಲೋಕಕ್ಕೆ ಮೈಕ್ರೋಸಾಫ್ಟ್ ಕಾಲಿಟ್ಟಾಗ, ಅವರು ಇಡೀ ಜಗತ್ತಿಗೆ ಸುಲಭವಾಗಿ ಅರ್ಥವಾಗುವ ಫಾಂಟ್‌ಗಾಗಿ ಹುಡುಕುತ್ತಿದ್ದರು. ಅವರ ಕಣ್ಣಿಗೆ ಬಿದ್ದದ್ದೇ ಟೈಮ್ಸ್ ನ್ಯೂ ರೋಮನ್. ಪರಿಣಾಮವಾಗಿ, ದಶಕಗಳ ಕಾಲ ಪ್ರತಿಯೊಬ್ಬರ ಕಂಪ್ಯೂಟರ್ ಆನ್ ಮಾಡಿದಾಗ ಮೊದಲು ಕಾಣಿಸುತ್ತಿದ್ದದ್ದೇ ಈ ಫಾಂಟ್. ಆಫೀಸ್ ನೋಟಿಸ್‌ನಿಂದ ಹಿಡಿದು ಕಾಲೇಜು ಪ್ರಾಜೆಕ್ಟ್‌ಗಳವರೆಗೆ ಇಂದಿಗೂ ಅಧಿಕೃತ ದಾಖಲೆಗಳಿಗೆ ಇದೇ ಮೊದಲ ಆಯ್ಕೆ.

ಯಾವುದೇ ಇಂಗ್ಲಿಷ್ ಕಾದಂಬರಿ ಅಥವಾ ಸಾಹಿತ್ಯದ ಪುಸ್ತಕವನ್ನು ತೆರೆದರೆ ಅಲ್ಲಿ ಗ್ಯಾರಾಮಂಡ್ ಫಾಂಟ್ ಇರುವುದು ಹೆಚ್ಚು. ಇದರ ಇತಿಹಾಸ 16ನೇ ಶತಮಾನಕ್ಕೆ (1500ರ ಕಾಲಘಟ್ಟ) ಹೋಗುತ್ತದೆ. ಫ್ರಾನ್ಸ್‌ನ ಕ್ಲೌಡ್ ಗ್ಯಾರಾಮಂಡ್ ಎಂಬ ಪ್ರಸಿದ್ಧ ಅಚ್ಚುಮೊಳೆ ವಿನ್ಯಾಸಕ ಇದನ್ನು ಸೃಷ್ಟಿಸಿದ. ಫ್ರಾನ್ಸ್‌ನ ರಾಜ ಒಂದನೇ ಫ್ರಾನ್ಸಿಸ್ ತನಗೆ ಬೇಕಾದ ಗ್ರೀಕ್ ಪುಸ್ತಕಗಳನ್ನು ಮುದ್ರಿಸಲು ಒಂದು ಸುಂದರ ಫಾಂಟ್ ಬೇಕು ಎಂದು ಗ್ಯಾರಾಮಂಡ್‌ನನ್ನು ಕೇಳಿಕೊಂಡಿದ್ದ. ಇದು ಓದಲು ಅತ್ಯಂತ ಆರಾಮದಾಯಕವಾದ ಮತ್ತು ಅತಿ ಹೆಚ್ಚು ಕಾಗದ/ಶಾಯಿಯನ್ನು ಉಳಿಸುವ ಫಾಂಟ್ ಆಗಿದೆ. ಐದು ಶತಮಾನಗಳು ಕಳೆದರೂ ಇಂದಿಗೂ ಮುದ್ರಣ ಲೋಕದಲ್ಲಿ ಇದರ ಜನಪ್ರಿಯತೆ ಕುಗ್ಗಿಲ್ಲ.

1750ರ ದಶಕದಲ್ಲಿ ಇಂಗ್ಲೆಂಡ್‌ನ ಜಾನ್ ಬಾಸ್ಕರ್‌ವಿಲ್ ಎಂಬ ಶ್ರೀಮಂತ ಉದ್ಯಮಿ ಒಂದು ಫಾಂಟ್ ಅನ್ನು ಸೃಷ್ಟಿಸಿದ. ಅದಕ್ಕೆ ಅವನ ಹೆಸರನ್ನೇ ಇಡಲಾಯಿತು. ಆತನಿಗೆ ಪುಸ್ತಕಗಳ ಮುದ್ರಣ ಗುಣಮಟ್ಟವನ್ನು ಹೆಚ್ಚಿಸಬೇಕೆಂಬ ಹುಚ್ಚು ಹಠವಿತ್ತು. ಬಾಸ್ಕರ್‌ವಿಲ್ ಕೇವಲ ಫಾಂಟ್ ವಿನ್ಯಾಸಗೊಳಿಸಲಿಲ್ಲ. ಆ ಫಾಂಟ್‌ಗೆ ತಕ್ಕಂತೆ ಕಡು ಕಪ್ಪಾದ ಇಂಕ್ ಮತ್ತು ನುಣುಪಾದ ಕಾಗದವನ್ನು ತಾನೇ ಸಂಶೋಧಿಸಿದ. ಆದರೆ, ಅಂದಿನ ಕಾಲದ ಜನರು ಈ ಫಾಂಟ್‌ನ ಅತಿಯಾದ ಕಾಂಟ್ರಾ ಮತ್ತು ತೀಕ್ಷ್ಣತೆಯಿಂದಾಗಿ ಇದನ್ನು ಓದಿದರೆ ಕಣ್ಣು ಕುರುಡಾಗುತ್ತದೆ ಎಂದು ಟೀಕಿಸಿದರು.

ಭಾಸ್ಕರ್ ವಿಲ್ ಬದುಕಿದ್ದಾಗ ಆತನಿಗೆ ಮನ್ನಣೆ ಸಿಗಲಿಲ್ಲ. ಆದರೆ ಆತನ ಮರಣದ ನಂತರ, ಈ ಫಾಂಟ್‌ನ ಶ್ರೇಷ್ಠತೆಯನ್ನು ಜಗತ್ತು ಒಪ್ಪಿಕೊಂಡಿತು. ಇಂದಿಗೂ ಬ್ರಿಟಿಷ್ ಸಾಹಿತ್ಯದಲ್ಲಿ ಇದಕ್ಕೆ ರಾಜ ಮನ್ನಣೆ ಇದೆ.

ಇಂಗ್ಲಿಷ್ ಫಾಂಟ್‌ಗಳನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಇವುಗಳ ವಿನ್ಯಾಸದ ಹಿಂದೆ ದೊಡ್ಡ ಮನೋವಿಜ್ಞಾನವೇ ಇದೆ. ಉದಾಹರಣೆಗೆ, ಸೆರಿಫ್. ಅಕ್ಷರಗಳ ತುದಿಗಳಲ್ಲಿ ಸಣ್ಣ ಗೆರೆಗಳು ಅಥವಾ ಕೊಂಡಿಗಳಿರುತ್ತವೆ (ಉದಾಹರಣೆಗೆ, Times New Roman). ಇವುಗಳನ್ನು ಓದುವಾಗ ಕಣ್ಣುಗಳಿಗೆ ಸುಲಭವಾಗಿ ದಾರಿ ತೋರಿಸಲು ಬಳಸಲಾಗುತ್ತದೆ. ಅದಕ್ಕೆ ಪುಸ್ತಕಗಳು ಮತ್ತು ಪತ್ರಿಕೆಗಳಲ್ಲಿ ಇವುಗಳನ್ನು ಹೆಚ್ಚು ಬಳಸುತ್ತಾರೆ. ಇನ್ನೊಂದು ಸಾನ್ಸ್–ಸೆರಿಫ್.

ಸಾನ್ಸ್ ಎಂದರೆ ಫ್ರೆಂಚ್ ಭಾಷೆಯಲ್ಲಿ ಇಲ್ಲದಿರುವುದು ಎಂದರ್ಥ. ಅಂದರೆ ಯಾವುದೇ ಕೊಂಡಿಗಳಿಲ್ಲದ ನೇರ ಅಕ್ಷರಗಳು (ಉದಾಹರಣೆಗೆ. Arial, Helvetica). ಇವು ಆಧುನಿಕ ಮತ್ತು ಸ್ವಚ್ಛ ನೋಟವನ್ನು ನೀಡುತ್ತವೆ. ಕಂಪ್ಯೂಟರ್ ಮತ್ತು ಮೊಬೈಲ್ ಪರದೆಗಳ ಮೇಲೆ ಇವುಗಳನ್ನು ಓದುವುದು ಸುಲಭ.

ಅಕ್ಷರಗಳು ಶಾಂತಿ ಮತ್ತು ಸಂವಹನದ ಮಾಧ್ಯಮ ಎಂದು ನಾವು ಭಾವಿಸುತ್ತೇವೆ. ಆದರೆ -ಫಾಂಟ್‌ಗಳ ಇತಿಹಾಸವನ್ನು ಕೆದಕಿದರೆ, ಅವುಗಳ ಹಿಂದೆ ದೊಡ್ಡ ದೊಡ್ಡ ಕಾನೂನು ಸಮರಗಳು, ಕೌಟುಂಬಿಕ ಕಲಹಗಳು ಮತ್ತು ಕೋರ್ಟ್ ಮೆಟ್ಟಿಲೇರಿದ ವಿವಾದಗಳು ನಡೆದಿವೆ. ಹೆಲ್ವೆಟಿಕಾ ಮತ್ತು ಏರಿಯಲ್ ಫಾಂಟ್ ವಿಚಾರದಲ್ಲಿ ನಡೆದ ಕಾರ್ಪೊರೇಟ್ ಯುದ್ಧವನ್ನು ಮರೆಯುವಂತಿಲ್ಲ.

1980ರ ದಶಕದಲ್ಲಿ ಆಪಲ್ ಕಂಪನಿಯು ತನ್ನ ಕಂಪ್ಯೂಟರ್‌ಗಳಲ್ಲಿ ವಿಶ್ವಪ್ರಸಿದ್ಧ ಹೆಲ್ವೆಟಿಕಾ ಫಾಂಟ್ ಬಳಸಲು ಪರವಾನಗಿ ಪಡೆದುಕೊಂಡಿತು. ಮೈಕ್ರೋಸಾಫ್ಟ್ ಕಂಪನಿಗೂ ಹೆಲ್ವೆಟಿಕಾ ಬೇಕಿತ್ತಾದರೂ, ಅದಕ್ಕೆ ಭಾರಿ ಪ್ರಮಾಣದ ರಾಯಲ್ಟಿ ಹಣ ನೀಡಲು ಇಷ್ಟವಿರಲಿಲ್ಲ.

ಇದಕ್ಕೆ ಪರ್ಯಾಯವಾಗಿ ಮೈಕ್ರೋಸಾಫ್ಟ್ ಏರಿಯಲ್ ಎಂಬ ಫಾಂಟ್ ಅನ್ನು ಸೃಷ್ಟಿಸಿತು. ಏರಿಯಲ್ ಫಾಂಟ್‌ನ ಪ್ರತಿ ಅಕ್ಷರದ ಅಗಲ ಮತ್ತು ಗಾತ್ರ ಹೆಲ್ವೆಟಿಕಾವನ್ನು ಹುಬೇಹುಬೆ ಹೋಲುತ್ತಿತ್ತು (ಈಗಲೂ ಡಿಸೈನರ್‌ಗಳು ಇದನ್ನು ನಕಲು ಎಂದೇ ಕರೆಯುತ್ತಾರೆ). ಈ ವಿಷಯವಾಗಿ ಡಿಸೈನ್ ಲೋಕದಲ್ಲಿ ದಶಕಗಳ ಕಾಲ ದೊಡ್ಡ ಬೌದ್ಧಿಕ ಆಸ್ತಿ ಹಕ್ಕಿನ ಜಗಳವೇ ನಡೆಯಿತು.

ರಾಜಕೀಯ ಇತಿಹಾಸದಲ್ಲಿ ಭ್ರಷ್ಟಾಚಾರದ ಕಾರಣಕ್ಕೆ ಪ್ರಧಾನಿಯೊಬ್ಬರು ಅಧಿಕಾರ ಕಳೆದುಕೊಂಡ ನೂರಾರು ಉದಾಹರಣೆಗಳಿವೆ. ಆದರೆ, ಕೇವಲ ಒಂದು ಫಾಂಟ್ ಕಾರಣದಿಂದಾಗಿ ಇಡೀ ದೇಶದ ಪ್ರಧಾನಿಯೇ ಜೈಲು ಪಾಲಾದ ಜಗತ್ತಿನ ಏಕೈಕ ಮತ್ತು ರೋಚಕ ಕಥೆಯೇ ಪಾಕಿಸ್ತಾನದ ಫಾಂಟ್ ಗೇಟ್ ಹಗರಣ. 2017ರಲ್ಲಿ ಪಾಕಿಸ್ತಾನದ ಅಂದಿನ ಪ್ರಧಾನಿ ನವಾಜ್ ಷರೀಫ್ ಮತ್ತು ಅವರ ಕುಟುಂಬದ ವಿರುದ್ಧ ಪನಾಮಾ ಪೇಪರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಲಂಡನ್‌ನಲ್ಲಿ ಅಕ್ರಮ ಆಸ್ತಿ ಹೊಂದಿದ ಗಂಭೀರ ಆರೋಪ ಕೇಳಿಬಂದಿತ್ತು. ಈ ಪ್ರಕರಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ಒಂದು ಜಂಟಿ ತನಿಖಾ ತಂಡವನ್ನು ರಚಿಸಿತ್ತು.

ತಮ್ಮನ್ನು ರಕ್ಷಿಸಿಕೊಳ್ಳಲು ನವಾಜ್ ಷರೀಫ್ ಮಗಳು ಮೇರಿಯಂ ನವಾಜ್ ಕೋರ್ಟ್‌ಗೆ ಕೆಲವು ಆಸ್ತಿ ಹಂಚಿಕೆಯ ಒಪ್ಪಂದದ ದಾಖಲೆಗಳನ್ನು ಸಲ್ಲಿಸಿದರು. ಆ ದಾಖಲೆಗಳ ಮೇಲೆ ಫೆಬ್ರವರಿ 2006ರ ದಿನಾಂಕವಿತ್ತು. ಮೇಲ್ನೋಟಕ್ಕೆ ಆ ದಾಖಲೆಗಳು ಅಸಲಿಯಾಗಿಯೇ ಕಾಣುತ್ತಿದ್ದವು. ಆದರೆ, ತನಿಖಾ ತಂಡವು ಆ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕಳ್ಳ ಸಿಕ್ಕಿ ಬಿದ್ದ!

ಆ ಆಸ್ತಿ ಪತ್ರಗಳನ್ನು ಮೈಕ್ರೋಸಾಫ್ಟ್ ವರ್ಡ್‌ನ ಪ್ರಸಿದ್ಧ ಕ್ಯಾಲಿಬ್ರಿ ಫಾಂಟ್‌ನಲ್ಲಿ ಟೈಪ್ ಮಾಡಲಾಗಿತ್ತು. ತನಿಖಾಧಿಕಾರಿಗಳು ತಕ್ಷಣವೇ ಬ್ರಿಟನ್‌ನ ಟೈಪೋಗ್ರಫಿ ತಜ್ಞರನ್ನು ಸಂಪರ್ಕಿಸಿದರು. ಆಗ ತಿಳಿದುಬಂದ ಆಘಾತಕಾರಿ ವಿಷಯವೇನೆಂದರೆ, ಮೈಕ್ರೋಸಾಫ್ಟ್ ಕಂಪನಿಯು ಕ್ಯಾಲಿಬ್ರಿ ಫಾಂಟ್ ಅನ್ನು ಸಾರ್ವಜನಿಕ ಬಳಕೆಗೆ ಅಧಿಕೃತವಾಗಿ ಬಿಡುಗಡೆ ಮಾಡಿದ್ದೇ 2007ರ ಜನವರಿಯಲ್ಲಿ ಎಂಬುದು.

ಅಂದರೆ, 2006ರಲ್ಲಿ ಇಡೀ ಜಗತ್ತಿನ ಅಸ್ತಿತ್ವದಲ್ಲಿಲ್ಲದ ಫಾಂಟ್ ಬಳಸಿ, 2006ರ ದಿನಾಂಕದ ನಕಲಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂಬುದು ಕೋರ್ಟ್‌ನಲ್ಲಿ ಸಾಬೀತಾಯಿತು. ಕಾಲ ಯಂತ್ರದ ಸಹಾಯವಿಲ್ಲದೇ ಈ ದಾಖಲೆ ಸೃಷ್ಟಿಸಲು ಸಾಧ್ಯವೇ ಇಲ್ಲ ಎಂದು ಪ್ರತಿಪಕ್ಷಗಳು ಲೇವಡಿ ಮಾಡಿದವು. ಈ ಒಂದು ಸಣ್ಣ ಅಕ್ಷರಶೈಲಿಯ ತಪ್ಪು ಇಡೀ ಪ್ರಕರಣಕ್ಕೆ ದೊಡ್ಡ ತಿರುವು ನೀಡಿತು. ಅವರು ದಾಖಲೆ ತಿದ್ದಿದ್ದು ಫಾಂಟ್‌ನಿಂದ ಸ್ಪಷ್ಟವಾಯಿತು.

ಸುಪ್ರೀಂ ಕೋರ್ಟ್ ನವಾಜ್ ಷರೀಫ್ ಅವರನ್ನು ದೋಷಿ ಎಂದು ಘೋಷಿಸಿ, ಪ್ರಧಾನಿ ಹುದ್ದೆಯಿಂದ ವಜಾಗೊಳಿಸಿತು ಹಾಗೂ ಅವರಿಗೆ ಹತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಡಿಜಿಟಲ್ ಯುಗದಲ್ಲಿ ಒಂದು ಸಣ್ಣ ಫಾಂಟ್ ಕೂಡ ಎಷ್ಟು ದೊಡ್ಡ ಸಾಕ್ಷ್ಯವಾಗಬಲ್ಲದು ಮತ್ತು ದೇಶದ ಪ್ರಧಾನಿಯನ್ನೇ ಪದಚ್ಯುತಗೊಳಿಸಬಹುದು ಎಂಬುದಕ್ಕೆ ಈ ಕ್ಯಾಲಿಬ್ರಿ ಫಾಂಟ್ ಹಗರಣ ಇತಿಹಾಸದಲ್ಲಿ ಜೀವಂತ ಉದಾಹರಣೆಯಾಗಿ ಉಳಿದುಬಿಟ್ಟಿತು.

ಫಾಂಟ್‌ಗಳು ಕೇವಲ ಕಾಗದದ ಮೇಲಿನ ರೇಖೆಗಳಲ್ಲ, ಅವು ಇತಿಹಾಸದ ಕಾಲಗತಿಯನ್ನು ತೋರ್ಪಡಿಸುವ ಜೀವಂತ ಸಾಕ್ಷಿಗಳು. ಇದಕ್ಕೆ ಅತ್ಯಂತ ಸೂಕ್ತ ಉದಾಹರಣೆಗಳೇ ಗಾಥಿಕ್ ಮತ್ತು -ಚುರಾ ಫಾಂಟ್‌ಗಳು.

ಇಂಗ್ಲಿಷ್ ಇತಿಹಾಸದ ಆರಂಭಿಕ ದಿನಗಳಲ್ಲಿ, ಅಂದರೆ 12ರಿಂದ 15ನೇ ಶತಮಾನದ ಮಧ್ಯಕಾಲೀನ ಯುಗದಲ್ಲಿ ಗಾಥಿಕ್ ಅಥವಾ ಬ್ಲ್ಯಾಕ್‌ಲೆಟರ್ ಶೈಲಿ ಜನ್ಮತಾಳಿತು. ಅಂದಿನ ಕಾಲದ ಕಡಿದಾದ ಚರ್ಚ್ ಗೋಪುರಗಳು, ದಪ್ಪನೆಯ ಕಲ್ಲಿನ ಗೋಡೆಗಳು ಮತ್ತು ರಾಜಪ್ರಭುತ್ವದ ಗಾಂಭೀರ್ಯವನ್ನು ಈ ಅಕ್ಷರಗಳು ಪ್ರತಿಬಿಂಬಿಸುತ್ತವೆ. ಅತ್ಯಂತ ದಪ್ಪ ರೇಖೆಗಳು ಮತ್ತು ಹರಿತವಾದ ಮೂಲೆಗಳನ್ನು ಹೊಂದಿರುವ ಈ ಫಾಂಟ್, ಇತಿಹಾಸದ ಕ್ರೌರ್ಯ, ಧಾರ್ಮಿಕತೆ ಮತ್ತು ಭವ್ಯತೆಯನ್ನು ಏಕಕಾಲದಲ್ಲಿ ನೆನಪಿಸುತ್ತದೆ. ಜೋಹಾನ್ ಗುಟೆನ್‌ಬರ್ಗ್ ತನ್ನ ಮೊದಲ ಬೈಬಲ್ ಅನ್ನು ಮುದ್ರಿಸಲು ಬಳಸಿದ್ದೂ ಇದೇ ಶೈಲಿಯನ್ನು!

ಇದಕ್ಕೆ ತದ್ವಿರುದ್ಧವಾಗಿ, 1927ರಲ್ಲಿ ಜರ್ಮನಿಯ ಪಾಲ್ ರೆನ್ನರ್ ವಿನ್ಯಾಸಗೊಳಿಸಿದ ಫಾಂಟ್–ಚುರಾ. ಇದು ಜ್ಯಾಮಿತೀಯ ವರ್ತುಲಗಳು ಮತ್ತು ನೇರ ರೇಖೆಗಳ ಆಧಾರದ ಮೇಲೆ ಸೃಷ್ಟಿಯಾದ ಅತ್ಯಂತ ಆಧುನಿಕ ಶೈಲಿ. ಇದು ಕೈಗಾರಿಕಾ ಕ್ರಾಂತಿ, ವೈಜ್ಞಾನಿಕ ಪ್ರಗತಿ ಮತ್ತು ಭವಿಷ್ಯದ ಆಲೋಚನೆಗಳನ್ನು ಪ್ರತಿನಿಧಿಸುತ್ತದೆ.

1969ರ ಜುಲೈ 20 ರಂದು ಅಪೊಲೊ 11 ಗಗನನೌಕೆಯ ಮೂಲಕ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಹೆಜ್ಜೆ ಇಟ್ಟು ಇತಿಹಾಸ ಸೃಷ್ಟಿಸಿದನಷ್ಟೇ. ಆ ಮಹೋನ್ನತ ಕ್ಷಣದ ನೆನಪಿಗಾಗಿ ಆತ ಚಂದ್ರನ ಮೇಲೆ ಒಂದು ಫಲಕವನ್ನು ನೆಟ್ಟ. ಆ ಫಲಕದಲ್ಲಿದ್ದ ಅಕ್ಷರಗಳನ್ನು ವಿನ್ಯಾಸಗೊಳಿಸಲು ಆಯ್ದು ಕೊಂಡದ್ದೇ -ಚುರಾ ಫಾಂಟ್ ಅನ್ನು!

ವಿಶ್ವದ ಇಷ್ಟೊಂದು ಫಾಂಟ್‌ಗಳ ನಡುವೆ ನಾಸಾ ಫ್ಯೂಚುರಾವನ್ನೇ ಆಯ್ಕೆ ಮಾಡಲು ಬಲವಾದ ಕಾರಣವಿತ್ತು. 1927ರಲ್ಲಿ ಸೃಷ್ಟಿಯಾದ ಈ ಫಾಂಟ್ ವೃತ್ತ, ತ್ರಿಕೋನಗಳಂಥ ಜ್ಯಾಮಿತೀಯ ಆಕಾರಗಳನ್ನು ಆಧರಿಸಿದ ಅತ್ಯಂತ ಆಧುನಿಕ ಹಾಗೂ ಸರಳ ವಿನ್ಯಾಸವನ್ನು ಹೊಂದಿತ್ತು. ಇದು ಮಾನವನ ವೈಜ್ಞಾನಿಕ ಪ್ರಗತಿ, ತಾಂತ್ರಿಕ ನಿಖರತೆ ಮತ್ತು ಭವಿಷ್ಯದ ದೃಷ್ಟಿಕೋನವನ್ನು ಅತ್ಯಂತ ಸುಂದರವಾಗಿ ಬಿಂಬಿಸುತ್ತಿತ್ತು.

ನಾವು ಭೂಮಿಯ ಇಡೀ ಮಾನವಕುಲದ ಶಾಂತಿಗಾಗಿ ಇಲ್ಲಿಗೆ ಬಂದಿದ್ದೇವೆ ಎಂಬ ಐತಿಹಾಸಿಕ ಸಂದೇಶವನ್ನು ಹೊತ್ತ ಆ ಫಲಕ ಇಂದಿಗೂ ಚಂದ್ರನ ಮೇಲಿದೆ. ಆ ಮೂಲಕ -ಚುರಾ ಭೂಮಿಯ ಗಡಿಗಳನ್ನು ದಾಟಿ, ಬಾಹ್ಯಾಕಾಶ ಸೇರಿದ ಹಾಗೂ ಅನ್ಯಲೋಕದಲ್ಲಿ ಅಮರವಾದ ವಿಶ್ವದ ಮೊಟ್ಟ ಮೊದಲ ಫಾಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಕ್ಷರಪ್ರೇಮಿಗಳಿಗೆ ಇದಕ್ಕಿಂತ ರೋಮಾಂಚನಕಾರಿ ಸಂಗತಿ ಬೇರೇನಿದೆ?

### ಕನ್ನಡ ಲಿಪಿಗಳ ರಾಣಿ

ಕನ್ನಡ ಲಿಪಿಗೆ ಅದರದ್ದೇ ಆದ ಭವ್ಯ ಇತಿಹಾಸವಿದೆ. ಜಗತ್ತಿನ ಸುಂದರ ಲಿಪಿಗಳಲ್ಲಿ ಒಂದಾದ ಕನ್ನಡವನ್ನು ಹತ್ತೊಂಬತ್ತನೇ ಶತಮಾನದ ಬ್ರಿಟಿಷ್ ಭಾಷಾತಜ್ಞ ಎಪಿಫ್ಯಾನಿಯಸ್ ವಿಲ್ಸನ್ ಲಿಪಿಗಳ ರಾಣಿ ಎಂದು ಕೊಂಡಾಡಿದ್ದ. ಕಲ್ಲುಗಳಿಂದ ಆರಂಭವಾಗಿ ತಾಳೆಗರಿಗಳ ಮೂಲಕ ಇಂದಿನ ಕಂಪ್ಯೂಟರ್ ಪರದೆಯವರೆಗೆ ಕನ್ನಡ ಅಕ್ಷರಗಳು ವಿಕಾಸಗೊಂಡ ಕಥೆ ಅತ್ಯಂತ ರೋಚಕವಾಗಿದೆ.

ಕನ್ನಡ ಲಿಪಿಯ ಆಕಾರವು ಕಾಲಕಾಲಕ್ಕೆ ಹೇಗೆ ಬದಲಾಯಿತು ಎಂಬುದನ್ನು ಗಮನಿಸಿದರೆ ನಮಗೆ ಮೂರು ಪ್ರಮುಖ ಘಟ್ಟಗಳು ಕಾಣಿಸುತ್ತವೆ. ಮೊದಲನೆಯದು, ಶಾಸನಗಳ ಕಾಲ ಮತ್ತು ಚೌಕಾ ಕಾರದ ಅಕ್ಷರಗಳು. ಕನ್ನಡದ ಆರಂಭಿಕ ಶಾಸನಗಳಾದ ಕದಂಬರ ಹಲ್ಮಿಡಿ ಶಾಸನ (ಸುಮಾರು ಕ್ರಿ.ಶ. 450) ಮತ್ತು ಬಾದಾಮಿ ಚಾಲುಕ್ಯರ ಶಿಲಾಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿನ ಅಕ್ಷರಗಳು ಕೊಂಚ ಚೌಕಾಕಾರವಾಗಿ ಅಥವಾ ಕೋನಗಳಿಂದ ಕೂಡಿರುವುದು ತಿಳಿಯುತ್ತದೆ. ಕಲ್ಲಿನ ಮೇಲೆ ಉಳಿ ಮತ್ತು ಸುತ್ತಿಗೆಯಿಂದ ಅಕ್ಷರಗಳನ್ನು ಕೆತ್ತುವಾಗ ನೇರ ರೇಖೆಗಳನ್ನು ಮೂಡಿಸುವುದು ಸುಲಭವಾಗಿತ್ತು. ವಿಜಯನಗರದ ಅರಸರ ಕಾಲಕ್ಕೆ ಬರುವಷ್ಟರಲ್ಲಿ ಈ ಕೆತ್ತನೆಯ ಕಲೆ ಇನ್ನಷ್ಟು ನಯಗೊಂಡು, ಅಕ್ಷರಗಳು ಸುಂದರ ರೂಪ ಪಡೆಯತೊಡಗಿದವು.

ಎರಡನೆಯದು, ತಾಳೆಗರಿಗಳ ಕ್ರಾಂತಿ ಮತ್ತು ದುಂಡಗಿನ ಆಕಾರ. ಕನ್ನಡ ಲಿಪಿಯು ಚೌಕಾಕಾರದಿಂದ ಸಂಪೂರ್ಣ ದುಂಡಗಿನ ಆಕಾರಕ್ಕೆ ಬದಲಾಗಲು ಮುಖ್ಯ ಕಾರಣ ತಾಳೆಗರಿಗಳು. ಮಧ್ಯಕಾಲೀನ ಯುಗದಲ್ಲಿ ಜ್ಞಾನ ಮತ್ತು ಸಾಹಿತ್ಯವನ್ನು ದಾಖಲಿಸಲು ತಾಳೆಗರಿಗಳನ್ನು ಬಳಸಲಾಗುತ್ತಿತ್ತು. ತಾಳೆಗರಿಗಳ ಮೇಲೆ ಬರೆಯಲು ಗಂಟಂ (ಲೋಹದ ಚೂಪಾದ ಕಡ್ಡಿ) ಎಂಬ ಲೇಖನಿಯನ್ನು ಬಳಸುತ್ತಿದ್ದರು. ಒಣಗಿದ ತಾಳೆಗರಿಯ ಮೇಲೆ ಇಂಗ್ಲಿಷ್‌ನ ಟಿ,ಎಲ್,ಎಕ್ಸ್, ನಂಥ ನೇರವಾದ ಅಥವಾ ಅಡ್ಡ ಗೆರೆಗಳನ್ನು ಎಳೆದರೆ, ಗರಿಯ ನಾರುಗಳು ಸೀಳಿ ಇಡೀ ತಾಳೆಗರಿಯೇ ಹರಿದು ಹೋಗುವ ಅಪಾಯವಿತ್ತು.

ಈ ತಾಂತ್ರಿಕ ಸಮಸ್ಯೆಗೆ ನಮ್ಮ ಪೂರ್ವಜರು ಕಂಡುಕೊಂಡ ಅದ್ಭುತ ಉಪಾಯವೇ ವರ್ತುಲಾ ಕಾರ. ಅಕ್ಷರಗಳನ್ನು ಎಲ್ಲೂ ಕತ್ತರಿಸದೆ ದುಂಡಗೆ, ಸುರುಳಿಯಾಕಾರವಾಗಿ ಬರೆದಾಗ ತಾಳೆಗರಿಗಳು ಹರಿಯದೆ ದೀರ್ಘಕಾಲ ಬಾಳಿಕೆ ಬರುತ್ತಿದ್ದವು. ಉದಾಹರಣೆಗೆ ಕನ್ನಡದ ಕ, ರ, ಮ, ವ ಅಕ್ಷರಗಳನ್ನು ಗಮನಿಸಿ; ಅವುಗಳಲ್ಲಿ ಎಲ್ಲೂ ಹರಿತವಾದ ಮೂಲೆಗಳಿಲ್ಲ, ಕೇವಲ ಮುದ ಸುರುಳಿಗಳಿವೆ!

ಮೂರನೆಯದು, ಮುದ್ರಣ ಮತ್ತು ಡಿಜಿಟಲ್ ಯುಗದ ಸೌಂದರ್ಯ. ಮುಂದೆ 19ನೇ ಶತಮಾನದಲ್ಲಿ ಕನ್ನಡ ಮುದ್ರಣ ಯಂತ್ರಗಳು ಬಂದಾಗ, ತಾಳೆಗರಿಯಲ್ಲಿದ್ದ ಆ ದುಂಡಗಿನ ಸೌಂದರ್ಯವನ್ನೇ ಅಚ್ಚುಮೊಳೆಗಳಿಗೂ ಅಳವಡಿಸಲಾಯಿತು. ಕಣ್ಣಿಗೆ ಯಾವುದೇ ಆಯಾಸ ನೀಡದ, ಮುತ್ತುಗಳನ್ನು ಪೋಣಿಸಿದಂತಿರುವ ಈ ದುಂಡಗಿನ ವಿನ್ಯಾಸವೇ ಇಂದು ಡಿಜಿಟಲ್ ಫಾಂಟ್‌ಗಳಿಗೂ ಅಡಿಪಾಯವಾಗಿದೆ.

ಹೀಗೆ, ಕನ್ನಡ ಅಕ್ಷರಗಳ ಸೌಂದರ್ಯವು ಕೇವಲ ಕಲಾತ್ಮಕತೆಯಿಂದ ಮಾತ್ರ ಮೂಡಿದ್ದಲ್ಲ. ಅದು ಪ್ರಕೃತಿ ಮತ್ತು ತಂತ್ರಜ್ಞಾನಕ್ಕೆ ತಕ್ಕಂತೆ ನಮ್ಮ ಹಿರಿಯರು ರೂಪಿಸಿದ ಅದ್ಭುತ ವೈಜ್ಞಾನಿಕ ವಿನ್ಯಾಸವಾಗಿದೆ. ಕನ್ನಡ ಲಿಪಿಯ ಈ ದುಂಡಗಿನ ಸೌಂದರ್ಯವು ನಮ್ಮ ಭಾಷೆಯ ಉಚ್ಚಾರಣಾ ಶಾಸ್ತ್ರಕ್ಕೂ ಪರಿಪೂರ್ಣವಾಗಿ ಒಗ್ಗಿಕೊಂಡಿತು. ಕನ್ನಡವು ಒಂದು ಸಂಪೂರ್ಣ ವೈಜ್ಞಾನಿಕ ಭಾಷೆ. ನಾವು ಹೇಗೆ ಉಚ್ಚರಿಸುತ್ತೇವೆಯೋ ಹಾಗೆಯೇ ಬರೆಯುತ್ತೇವೆ.

ಈ ಉಚ್ಚಾರಣೆಯ ಮೃದುತ್ವ ಮತ್ತು ಗಾಂಭೀರ್ಯ ಎರಡನ್ನೂ ಅಕ್ಷರಗಳ ದುಂಡನೆಯ ಬಾಗುಗಳು ಕಣ್ಣಿಗೆ ಕಲಾತ್ಮಕವಾಗಿ ದಾಟಿಸುತ್ತವೆ. ಕನ್ನಡ ಅಕ್ಷರಗಳ ಮೇಲ್ಭಾಗದಲ್ಲಿರುವ ತಲೆಕಟ್ಟು (ಉದಾ ಹರಣೆಗೆ: ಕ, ಚ, ತ) ಮತ್ತು ಅಕ್ಷರಗಳ ಕೆಳಗಿನ ಸಣ್ಣ ಕೊಂಡಿಗಳು ಇಡೀ ವಾಕ್ಯಕ್ಕೆ ಒಂದು ಸುಂದರ ವಾದ ಲಯವನ್ನು ನೀಡುತ್ತವೆ. ಅಕ್ಷರಗಳು ಮುತ್ತುಗಳನ್ನು ಸಾಲಾಗಿ ಪೋಣಿಸಿದಂತೆ ಕಾಣುತ್ತವೆ.

ವಿಶೇಷವೇನೆಂದರೆ, ಇಂದಿನ ಆಧುನಿಕ ವೆಬ್‌ಸೈಟ್‌ಗಳು ಮತ್ತು ಸ್ಮಾರ್ಟ್ ಫೋನ್‌ಗಳ ಪರದೆಯ ಮೇಲೂ ಕನ್ನಡದ ಈ ವರ್ತುಲ ಶೈಲಿ ಅತ್ಯಂತ ಆಕರ್ಷಕವಾಗಿ ಕಾಣುತ್ತದೆ. ಅತಿ ಸಣ್ಣ ಗಾತ್ರದಲ್ಲೂ ಅಕ್ಷರಗಳು ಸ್ಪಷ್ಟವಾಗಿ ಓದಿಸಿಕೊಳ್ಳುತ್ತವೆ. ಜಗತ್ತಿನ ಎಷ್ಟೋ ಲಿಪಿಗಳು ತಂತ್ರಜ್ಞಾನ ಬದಲಾದಂತೆ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡರೆ, ಕನ್ನಡ ಲಿಪಿಯು ಶಾಸನಗಳ ಕಲ್ಲಿನಿಂದ ಹಿಡಿದು ಇಂದಿನ ಪಿಕ್ಸೆಲ್ ಪರದೆಯವರೆಗೂ ತನ್ನ ರಾಜಗಾಂಭೀರ್ಯ ಮತ್ತು ಸೌಂದರ್ಯವನ್ನು ಹಾಗೇ ಉಳಿಸಿಕೊಂಡು ಬಂದಿದೆ. ಅದಕ್ಕೇ ಇದನ್ನು ಲಿಪಿಗಳ ರಾಣಿ ಎನ್ನುವುದು. ನಮ್ಮ ಕಣ್ಣುಗಳು ಆಕಾರ ಗೋಲ. ಕನ್ನಡದ ಅಕ್ಷರಗಳ ಆಕಾರವೂ ಗೋಲ ಅಥವಾ ಅರ್ಧ ಗೋಲ. ಹೀಗಾಗಿ ಕನ್ನಡ ಲಿಪಿಗಳು ಜಗತ್ತಿನಲ್ಲಿಯೇ ಸುಂದರ ಲಿಪಿಗಳಂದು ಎಂದು ಮಾನ್ಯತೆ ಪಡೆದಿವೆ.

**– ವಿಶ್ವೇಶ್ವರ ಭಟ್**

---

**ಸಾಮಾಜಿಕ ಜಾಲತಾಣಗಳಲ್ಲಿನ ವ್ಯೂಸ್, ಲೈಕ್ಸ್ ಮತ್ತು ಫಾಲೋವರ್ಸ್‌ಗಳ ಸಂಖ್ಯೆಯನ್ನು ತಮ್ಮ ವ್ಯಕ್ತಿತ್ವದ ಅಳತೆಗೋಲು ಎಂದುಕೊಂಡಿರುವ ಇಂದಿನ ಯುವ ಪೀಳಿಗೆಯು, ಅರಿವಿಲ್ಲದೆಯೇ ತಮ್ಮ ಸಮಯ ಮತ್ತು ಸೃಜನಶೀಲತೆಯನ್ನು ಅಲ್ಪಸ್ವಲ್ಪ ಪ್ರಚಾರಕ್ಕಾಗಿ ಬಲಿ ನೀಡುತ್ತಿದೆ. ಯೂಟ್ಯೂಬ್ ಚಾನೆಲ್‌ಗಳನ್ನು ತೆರೆದು, ಸಬ್‌ಸ್ಕ್ರೈಬಸ್‌ಗಳನ್ನು ಹೆಚ್ಚಿಸಿಕೊಳ್ಳುವುದೇ ಬದುಕಿನ ಅಂತಿಮ ಗುರಿ ಎನ್ನುವಂತೆ ಬದುಕುತ್ತಿರುವ ಯುವಜನತೆಯ ಈ ಹಾದಿ, ದಿಕ್ಕುತಪ್ಪಿದ ದಾರಿಯಾಗಿದೆ.**

## ಸಾಬೂನಿನ ಗುಳ್ಳೆಯಂಥ ವೈರಲ್ ಫೇಮ್!

ಸಮಕಾಲಿಕ ಮಾನವ ನಾಗರಿಕತೆಯ ಇತಿಹಾಸವನ್ನು ಅವಲೋಕಿಸಿದರೆ, ಪ್ರತಿ ಕಾಲಘಟ್ಟವೂ ತನ್ನದೇ ಆದ ಸವಾಲುಗಳು ಮತ್ತು ಸಾಧನೆಯ ಮಾನದಂಡಗಳನ್ನು ಹೊಂದಿದೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ, ಸಾಧನೆ ಎಂಬ ಪದದ ಅರ್ಥವು ಅತ್ಯಂತ ಸಂಕುಚಿತ ಮತ್ತು ಬಾಹ್ಯ ಆಕರ್ಷಣೆಗಳ ಭ್ರಮೆಗೆ ಒಳಗಾಗಿರುವುದು ವಿಷಾದನೀಯ. ಇಂದಿನ ಯುವಜನತೆ ವರ್ಚುವಲ್ ಜಗತ್ತಿನ ಕೃತಕ ಹೊಳಪಿನ ಬೆನ್ನತ್ತಿ, ವಾಸ್ತವಿಕ ಬದುಕಿನ ಘನತೆಯನ್ನು ಮರೆಯುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿನ ವ್ಯೂಸ್, ಲೈಕ್ಸ್ ಮತ್ತು ಫಾಲೋವರ್ಸ್‌ಗಳ ಸಂಖ್ಯೆಯನ್ನು ತಮ್ಮ ವ್ಯಕ್ತಿತ್ವದ ಅಳತೆಗೋಲು ಎಂದುಕೊಂಡಿರುವ ಇಂದಿನ ಯುವ ಪೀಳಿಗೆಯು, ಅರಿವಿಲ್ಲದೆಯೇ ತಮ್ಮ ಸಮಯ ಮತ್ತು ಸೃಜನಶೀಲತೆಯನ್ನು ಅಲ್ಪಸ್ವಲ್ಪ ಪ್ರಚಾರಕ್ಕಾಗಿ ಬಲಿ ನೀಡುತ್ತಿದೆ. ಯೂಟ್ಯೂಬ್ ಚಾನೆಲ್‌ಗಳನ್ನು ತೆರೆದು, ಸಬ್‌ಸ್ಕ್ರೈಬಸ್‌ಗಳನ್ನು ಹೆಚ್ಚಿಸಿಕೊಳ್ಳುವುದೇ ಬದುಕಿನ ಅಂತಿಮ ಗುರಿ ಎನ್ನುವಂತೆ ಬದುಕುತ್ತಿರುವ ಯುವಜನತೆಯ ಈ ಹಾದಿ, ದಿಕ್ಕುತಪ್ಪಿದ ದಾರಿಯಾಗಿದೆ.

ನಿಜವಾದ ಸಾಧನೆಯೆಂದರೆ ಅಂತರಂಗದ ವಿಕಸನ, ಜ್ಞಾನದ ಆರ್ಜನೆ ಮತ್ತು ಸಮಾಜಕ್ಕೆ ನೀಡುವ ರಚನಾತ್ಮಕ ಕೊಡುಗೆಯಾಗಿದೆ. ಆದರೆ ಇಂದಿನ ಯುವಕರು ತಾತ್ಕಾಲಿಕ ಖ್ಯಾತಿಯನ್ನು ಸಾಧನೆ ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ.



ಸಾಮಾಜಿಕ ಜಾಲತಾಣಗಳಲ್ಲಿ ದಿನನಿತ್ಯದ ಚಟುವಟಿಕೆಗಳನ್ನು, ವೈಯಕ್ತಿಕ ಬದುಕಿನ ತುಣುಕುಗಳನ್ನು ಮತ್ತು ಕೆಲವೊಮ್ಮೆ ಸಭ್ಯತೆಯ ಹದ್ದು ಮೀರಿದ ಹುಚ್ಚಾಟಗಳನ್ನು ಪ್ರದರ್ಶಿಸುವುದೇ ಸಾಧನೆ ಎಂಬ ಭ್ರಮೆ ಆವರಿಸಿದೆ. ಈ ವರ್ಚುವಲ್ ಜಗತ್ತಿನ ಅಲ್ಪಾವಧಿಯ ಜನಪ್ರಿಯತೆಯು ಒಬ್ಬ ಯುವಕನಿಗೆ ತಾನು ದೊಡ್ಡ ಮಟ್ಟದ ಸಾಧಕನೆಂಬ ಭ್ರಮೆಯನ್ನು ಮೂಡಿಸುತ್ತದೆ. ಇಂಟರ್‌ನೆಟ್‌ನಲ್ಲಿ ವೈರಲ್ ಆಗಿರುವ ವ್ಯಕ್ತಿಗಳನ್ನು, ಅವರ ಹಿನ್ನೆಲೆ ಅಥವಾ ಜ್ಞಾನದ ಆಳವನ್ನು ಗಮನಿಸದೆ ನೇರವಾಗಿ ರಿಯಾಲಿಟಿ ಶೋಗಳು ಅಥವಾ ಮಾಧ್ಯಮಗಳು ವೇದಿಕೆ ಒದಗಿಸುತ್ತಿರುವುದು ಈ ಭ್ರಮೆಯನ್ನು ಇನ್ನಷ್ಟು ಗಟ್ಟಿಗೊಳಿಸಿದೆ.

ಟ್ರೋಲ್ ಆಗುವ ವಿಡಿಯೋಗಳು ಅಥವಾ ಸಮಾಜದ ಹಿತಕ್ಕೆ ವಿರುದ್ಧವಾದ ವಿವಾದಾತ್ಮಕ ಹೇಳಿಕೆಗಳೇ ಅತೀ ಹೆಚ್ಚು ವೀಕ್ಷಣೆಗಳನ್ನು ಪಡೆಯುವ ಇಂದಿನ ಕಾಲಘಟ್ಟದಲ್ಲಿ, ಯುವಕರು ತಾವು ಆಕರ್ಷಕವಾಗಿ ಕಾಣುತ್ತಿದ್ದೇವೆ ಎಂದುಕೊಂಡರೆ ಅದು ಅವರ ದುರದೃಷ್ಟವೇ ಸರಿ. ಮಾಧ್ಯಮಗಳ ಈ ವರ್ತನೆಯು ನಿಜವಾದ ಪ್ರತಿಭೆಗಳನ್ನು ಮರೆಮಾಚಿ, ಕೇವಲ ಸದ್ದು ಮಾಡುವ ವ್ಯಕ್ತಿಗಳನ್ನು ತಲೆಮೇಲೆ ಹೊತ್ತು ಮೆರೆಸುವ ಕೆಲಸ ಮಾಡುತ್ತಿದೆ, ಇದು ಯುವಜನತೆಯ ದಾರಿ ತಪ್ಪಲು ಇನ್ನೊಂದು ಪ್ರಮುಖ ಕಾರಣವಾಗಿದೆ.

ನಿಜವಾದ ಸಾಧನೆ ಎನ್ನುವುದು ನಿಶ್ಯಬ್ದವಾದ ತಪಸ್ಸು. ಅದು ರಸ್ತೆ ಬದಿಯಲ್ಲಿ ಮಾಡುವ ನೃತ್ಯದ ಅಥವಾ ಕ್ಯಾಮೆರಾ ಮುಂದೆ ಮಾಡುವ ಅಸಂಬದ್ಧ ಭಾಷಣದ ಅಡಗಿಲ್ಲ. ಸಾಧನೆ ಎನ್ನುವುದು ಮನುಷ್ಯನ ಜ್ಞಾನದ ಹರವು, ಕೌಶಲ್ಯದ ನಿಖರತೆ ಮತ್ತು ಆತ ಸಮಾಜಕ್ಕೆ ನೀಡುವ ಮೌಲ್ಯಯುತ ಕೊಡುಗೆಯಲ್ಲಿ ಅಡಗಿದೆ. ವಿನ, ಸಾಹಿತ್ಯ, ಕಲೆ, ಕೃಷಿ ಅಥವಾ ತಂತ್ರಜ್ಞಾನದ ಕ್ಷೇತ್ರದಲ್ಲಿ ಮೌನವಾಗಿ ಕೆಲಸ ಮಾಡುತ್ತಿರುವವರ ಮಾಡುವ ಕೆಲಸವೇ ನಿಜವಾದ ಸಾಧನೆ. ಇಂದಿನ ಯುವಕರು ಈ ಭೌತಿಕ ಹೊಳಪಿನಿಂದ ಹೊರಬಂದು, ತಮ್ಮ ಆಳವಾದ ಆಸಕ್ತಿಗಳನ್ನು ಗುರುತಿಸಿಕೊಳ್ಳಬೇಕು.

ಕೇವಲ ಡಿಜಿಟಲ್ ಜಗತ್ತಿನಲ್ಲಿ ಬದುಕುವುದನ್ನು ಬಿಟ್ಟು, ಪುಸ್ತಕಗಳನ್ನು ಓದಬೇಕು, ಲೋಕ ಜ್ಞಾನವನ್ನು ಪಡೆಯಬೇಕು, ವಿಮರ್ಶಾತ್ಮಕ ಚಿಂತನೆಯನ್ನು ರೂಢಿಸಿಕೊಳ್ಳಬೇಕು. ಸಾಮಾಜಿಕ ಜಾಲತಾಣಗಳು ಕೇವಲ ಮಾಹಿತಿಯ ವಿನಿಮಯಕ್ಕೆ ಅಥವಾ ಜ್ಞಾನ ಪ್ರಸಾರಕ್ಕೆ ಸೀಮಿತವಾಗಿರಬೇಕು, ಅಷ್ಟೇ ಹೊರತು ಅದು ಬದುಕಿನ ಮಾದರಿಯಾಗಬಾರದು. ಸಾಧನೆಗೆ ಸಿದ್ಧಾಂತದ ಅಡಿಪಾಯವಿರಬೇಕು, ತಾತ್ಕಾಲಿಕ ಖ್ಯಾತಿಯ ಹಸಿವು ಇರಬಾರದು.

ಯುವಜನತೆ ಮರೆಯುತ್ತಿರುವ ದೊಡ್ಡ ವಿಷಯವೆಂದರೆ, ಸಮಯದ ಮೌಲ್ಯ. ದಿನದ ಹದಿನಾಲ್ಕು ತಾಸುಗಳನ್ನು ಫೋನ್ ಪರದೆಯ ಮೇಲೆ ಕಳೆಯುವ ಯುವಕ, ತಾನು ಕಲಿಯಬಹುದಾದ ಹೊಸ ವಿಷಯಗಳನ್ನು, ಮಾಡಬಹುದಾದ ಪ್ರಯೋಗಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಸಾಧನೆ ಎಂಬುದು ಒಮ್ಮೆಲೆ ಸಿಗುವಂತದ್ದಲ್ಲ, ಅದಕ್ಕೆ ಶ್ರಮ, ತಾಳ್ಮೆ ಮತ್ತು ನಿರಂತರವಾದ ಅಭ್ಯಾಸದ ಅಗತ್ಯವಿರುತ್ತದೆ.

ಇಂದಿನ ಯುವಕರಿಗೆ ದಕ್ಕುತ್ತಿರುವ ವೈರಲ್ ಫೇಮ್ ಒಂದು ಸಾಬೂನಿನ ಗುಳ್ಳೆಯಿದ್ದಂತೆ, ಅದು ಎಷ್ಟು ಬೇಗ ಮೇಲಕ್ಕೆ ಏರುತ್ತದೆಯೋ ಅಷ್ಟೇ ಬೇಗ ಒಡೆದು ಹೋಗುತ್ತದೆ. ಆದರೆ ಜ್ಞಾನ ಮತ್ತು ಕೌಶಲ್ಯದ ಮೂಲಕ ಗಳಿಸಿದ ಗೌರವ ಅಚಲವಾಗಿರುತ್ತದೆ. ಸಮಾಜದ ಕಣ್ಣಿಲ್ಲಿ ದೊಡ್ಡವನಾಗುವುದಕ್ಕಿಂತ, ಸ್ವಂತದ ಆತ್ಮಸಾಕ್ಷಿಯ ಮುಂದೆ ಪ್ರಾಮಾಣಿಕನಾಗಿರುವುದು ಮುಖ್ಯ. ಯುವಜನತೆ ತಾವು ಪ್ರತಿದಿನ ಮಾಡುತ್ತಿರುವ ಕೆಲಸದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ಮಾಡುತ್ತಿರುವುದು ನನ್ನ ವ್ಯಕ್ತಿತ್ವವನ್ನು ಎತ್ತರಿಸುತ್ತಿದೆಯೇ ಅಥವಾ ಕೇವಲ ಇತರರ ಮೆಚ್ಚುಗೆಗಾಗಿ ಮಾಡುತ್ತಿರುವ ನಾಟಕವೇ ಎಂಬ ಪ್ರಶ್ನೆ ಪ್ರತಿಯೊಬ್ಬರಿಗೂ ಕಾಡಬೇಕು.

ಸಾಧನೆಯೆಂದರೆ ಸಮಾಜದ ಬದಲಾವಣೆಗೆ ನಾವು ನೀಡುವ ಕಾಣಿಕೆ. ಹಸಿವು ನೀಗಿಸುವ ಕೆಲಸವೋ, ಜ್ಞಾನದ ಬೆಳಕನ್ನು ಪಸರಿಸುವ ಕಾಯಕವೋ ಅಥವಾ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನವೋ–ಇವೇ ನಿಜವಾದ ಸಾಧನೆಯ ದಾರಿಗಳು. ಸಾಮಾಜಿಕ ಜಾಲತಾಣಗಳ ಕೃತಕ ಮನ್ನಣೆಗಳನ್ನು ಬಿಟ್ಟು, ಭೂಮಿಯ ಮೇಲೆ ಕಾಲಿಟ್ಟು ವಾಸ್ತವದ ಬದುಕನ್ನು ರೂಪಿಸಿಕೊಳ್ಳುವ ಅವಶ್ಯಕತೆ ಇಂದಿನ ಯುವಕರಿಗೆ ಇದೆ.

ಹೊಸ ದಾರಿ ಎಂದರೆ ತಂತ್ರಜ್ಞಾನವನ್ನು ತ್ಯಜಿಸುವುದಲ್ಲ, ಬದಲಾಗಿ ತಂತ್ರಜ್ಞಾನವನ್ನು ಆಳುವವರಾಗುವುದೇ ಹೊರತು, ತಂತ್ರಜ್ಞಾನದ ಗುಲಾಮರಾಗುವುದಲ್ಲ. ಯುವಜನತೆಯು ತಮ್ಮ ಬುದ್ಧಿಶಕ್ತಿಯನ್ನು ತೀಕ್ಷ್ಣಗೊಳಿಸಿಕೊಳ್ಳಬೇಕು, ವಿವೇಚನೆಯನ್ನು ಹೆಚ್ಚಿಸಿಕೊಳ್ಳಬೇಕು. ಆಗ ಮಾತ್ರ ಅವರು ನಿಜವಾದ ಅರ್ಥದಲ್ಲಿ ಸಾಧಕರಾಗಲು ಸಾಧ್ಯ. ಜಗತ್ತು ನಿಮ್ಮನ್ನು ಅನುಸರಿಸುವಂತೆ ಮಾಡಬೇಕೇ ಹೊರತು, ಜಗತ್ತು ನೀಡುವ ಅಲ್ಪಸ್ವಲ್ಪ ಗಮನಕ್ಕೆ ನೀವು ಜೋತು ಬೀಳಬಾರದು. ಹೊಸ ದಾರಿಯೆಂದರೆ ಜ್ಞಾನದ ದಾರಿ, ಅದು ಎಂದಿಗೂ ಅಳಿಯದ ಕೀರ್ತಿಯನ್ನು ನೀಡುತ್ತದೆ.



**– ಮೊಹಮ್ಮದ್ ಅಜರುದ್ದೀನ್** ಅಕ್ಕಿಹೆಬ್ಬಾಳು

---

## ಸೋಲನ್ನು ಗೆಲ್ಲುವಿನ ಮೆಟ್ಟಿಲಾಗಿಸುವುದು ಹೇಗೆ?

ಜೀವನವೆಂಬುದು ಒಂದು ಸುಂದರ ಪಯಣ. ಇಲ್ಲಿ ಏರಿಳಿತಗಳು ಸಹಜ. ಆದರೆ, ನಾವು ಒಂದು ಬಾರಿ ಸೋತಾಗ ಕುಸಿದು ಹೋಗುತ್ತೇವೆ. ನೆನಪಿಡಿ, ಸೋಲು ಎಂಬುದು ಜೀವನದ ಅಂತ್ಯವಲ್ಲ, ಅದು ಒಂದು ಹೊಸ ಆರಂಭದ ಮುನ್ನುಡಿ. ಜಗತ್ತಿನ ಪ್ರತಿಯೊಬ್ಬ ಸಾಧಕನೂ ತನ್ನ ಗೆಲುವಿಗಿಂತ ಮೊದಲು ನೂರಾರು ಬಾರಿ ಸೋತಿರುತ್ತಾನೆ. ಹಾಗಾದರೆ, ಆ ಸೋಲನ್ನು ಗೆಲುವನ್ನಾಗಿ ಬದಲಾ ಯಿಸುವುದು ಹೇಗೆ?



ಇಲ್ಲಿದೆ ಕೆಲವು ದಾರಿಗಳು:

**1. ಸೋಲನ್ನು ಸ್ವೀಕರಿಸಿ:** ಸೋತಾಗ ಬೇರೆಯವರನ್ನು ಅಥವಾ ಹ ಣ ಬ ರ ಹ ವ ನ್ನು ದೂಷಿಸಬೇಡಿ. ಮೊದಲು ಆ ಸೋಲನ್ನು ಒಪ್ಪಿಕೊಳ್ಳಿ. ನಾವು ಸೋತಿದ್ದೇವೆ. ಎಂದು ಒಪ್ಪಿಕೊಂಡಾಗ ಮಾತ್ರ ಅದನ್ನು ಸರಿಪಡಿಸಿಕೊಳ್ಳುವ ದಾರಿ ಕಾಣುತ್ತದೆ.

**2. ಆತ್ಮಾವಲೋಕನ ಮಾಡಿ:** ನಾನು ಎಲ್ಲಿ ತಪ್ಪು ಮಾಡಿದೆ ? ಎಂದು ಯೋಚಿಸಿ. ಗೆಲುವು ನಮಗೆ ಅಹಂಕಾರ ಕೊಡಬಹುದು. ಆದರೆ ಸೋಲು ನಮಗೆ ಪಾಠ ಕಲಿಸುತ್ತದೆ. ಸೋಲಿಗೆ ಕಾರಣವಾದ ತಪ್ಪುಗಳನ್ನು ಪಟ್ಟಿ ಮಾಡಿ. ಅವುಗಳನ್ನು ಮುಂದಿನ ಬಾರಿ ಮಾಡದಂತೆ ಎಚ್ಚರಿಕೆ ವಹಿಸಿ.

**3. ದೃಷ್ಟಿಕೋನ ಬದಲಾಯಿಸಿ:** ಸೋಲನ್ನು ಒಂದು ಅವಮಾನ ಎಂದು ಭಾವಿಸಬೇಡಿ. ಬದಲಿಗೆ ಅದನ್ನೊಂದು ಅನುಭವ ಎಂದು ಪರಿಗಣಿಸಿ. ಸೋಲು ಎಂದರೆ ಇನ್ನೂ ಪ್ರಯತ್ನ ಸಾಲದು ಎಂದರ್ಥವೇ ಹೊರತು ನೀವು ಅಸಮರ್ಥರು ಎಂದಲ್ಲ.

**4. ತಾಳ್ಮೆ ಮತ್ತು ಸತತ ಪ್ರಯತ್ನ:** ಯಾವುದೇ ದೊಡ್ಡ ಸಾಧನೆ ಒಂದೇ ದಿನದಲ್ಲಿ ಆಗುವುದಿಲ್ಲ. ಮಗು ನಡೆಯುವ ಮುನ್ನ ನೂರಾರು ಬಾರಿ ಬಿದ್ದಿರುತ್ತದೆ. ಆದರೆ ಬೀಳುತ್ತೇನೆ ಎಂದು ಅದು ನಡೆಯುವುದನ್ನು ಬಿಡುವುದಿಲ್ಲ. ಹಾಗೆಯೇ. ನಿಮ್ಮ ಗುರಿಯತ್ತ ಸತತವಾಗಿ ಪ್ರಯತ್ನಿಸುತ್ತಿರಿ.

**5. ಭರವಸೆಯನ್ನು ಕಳೆದುಕೊಳ್ಳಬೇಡಿ:** ನಕಾರಾತ್ಮಕ ಆಲೋಚನೆಗಳಿಂದ ದೂರವಿರಿ. ನಿಮ್ಮ ಮೇಲೆ ನಿಮಗೆ ನಂಬಿಕೆ ಇರಲಿ. ನನ್ನಿಂದ ಸಾಧ್ಯ ಎಂಬ ಆತ್ಮವಿಶ್ವಾಸವೇ ಅರ್ಧ ಗೆಲುವಿಗೆ ಸಮ.

ಬ್ಲಾಗ್ ಓದುಗರಿಗಾಗಿ ಒಂದು ಮಾತು: ಗೆಲುವು ಎಂಬುದು ಮೈಲಿಗಲ್ಲು ಮಾತ್ರ. ಆದರೆ ಸೋಲು ಎಂಬುದು ನಮಗೆ ನಡೆಯಲು ಕಲಿಸುವ ಗುರು. ನೀವು ಎಂದಾದರೂ ಒಂದು ದೊಡ್ಡ ಸೋಲಿನ ನಂತರ ಪುಟಿದೆದ್ದ ಘಟನೆ ಇದೆಯೇ?

## ಕರಾಚಿ ದಾಳಿಯಲ್ಲಿ ಭಾರತದ ಕೈವಾಡ: ಪಾಕ್ ಆರೋಪ ಅಲ್ಲಗೆಳೆದ ವಿದೇಶಾಂಗ ಸಚಿವಾಲಯ

• ಪ್ರಜೋದಯ ವರದಿ



**ನವದೆಹಲಿ:** ಕರಾಚಿಯ ಸಿಂಧ್ ರೇಂಜರ್ಸ್ ಮೇಲಿನ ಭಯೋತ್ಪಾದಕ ದಾಳಿಯಲ್ಲಿ ತನ್ನ ಕೈವಾಡವಿದೆ ಎಂಬ ಪಾಕಿಸ್ತಾನದ ಆರೋಪವನ್ನು ಭಾರತ ತಳ್ಳಿ ಹಾಕಿದೆ. ಇಂತಹ ಆಧಾರರಹಿತ ಆರೋಪ ಮಾಡುವ ಬದಲು ನಿಮ್ಮ ನೆಲದಲ್ಲಿ ಉಗ್ರರ ನೆಲೆಗಳನ್ನು ನಾಶ ಮಾಡುವತ್ತ ಗಮನ ಹರಿಸಿ ಎಂದು ಹೇಳಿದೆ.

ದಾಳಿಯಲ್ಲಿ ಭಾರತದ ಕೈವಾಡವಿದೆ ಎಂಬ ಪಾಕಿಸ್ತಾನದಿಂದ ಬರುತ್ತಿರುವ ವರದಿಗಳ ಬಗ್ಗೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಆರೋಪಗಳನ್ನು ತಳ್ಳಿ ಹಾಕಿದ್ದಾರೆ.

ಕರಾಚಿಯಲ್ಲಿ ಶನಿವಾರ ನಡೆದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಭಾರತದ ಮೇಲೆ ಆರೋಪ ಮಾಡುತ್ತಿರುವ ಪಾಕಿಸ್ತಾನದ ವರದಿಗಳು ಆಧಾರರಹಿತ. ಪಾಕಿಸ್ತಾನ ಇಂತಹ ಆಧಾರ ರಹಿತ ಆರೋಪ ಮಾಡುವುದನ್ನು ನಾವು ನೋಡಿದ್ದೇವೆ. ಅವುಗಳನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ ಎಂದು ಜೈಸ್ವಾಲ್ ಹೇಳಿದ್ದಾರೆ.

ಪಾಕಿಸ್ತಾನ ಇತರರ ಕಡೆಗೆ ಬೆರಳು ತೋರಿಸುವುದನ್ನು ಬಿಟ್ಟು ತನ್ನ ದೇಶದೊಳಗೇ ಕಾರ್ಯ ನಿರ್ವಹಿಸುತ್ತಿರುವ ಭಯೋತ್ಪಾದಕ ಜಾಲಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

ಪಾಕಿಸ್ತಾನವು ತನ್ನ ಪ್ರದೇಶದ ಭಯೋತ್ಪಾದಕ ಮೂಲಸೌಕರ್ಯದ ವಿರುದ್ಧ ವಿಶ್ವಾಸಾರ್ಹ ಕ್ರಮ ತೆಗೆದುಕೊಳ್ಳುವುದು ಮತ್ತು ಭಯೋತ್ಪಾದನೆಯನ್ನು ರಾಜ್ಯ ನೀತಿಯ ಸಾಧನವಾಗಿ ಅವಲಂಬಿಸುವ ಪ್ರವೃತ್ತಿಯನ್ನು ತೊಡೆದುಹಾಕುವುದು ಉತ್ತಮ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರರು ಹೇಳಿದ್ದಾರೆ.

ಪಾಕಿಸ್ತಾನದ ಅಧಿಕಾರಿಗಳ ಪ್ರಕಾರ, ಶನಿವಾರ ಸಂಜೆ ಕರಾಚಿಯ ಗುಲಿಸ್ತಾನ್ ಎ ಜೌಹರ್ ಪ್ರದೇಶದಲ್ಲಿರುವ ಸಿಂಧ್ ರೇಂಜರ್ಸ್‌ನ ಭಿಟ್ಟೆ ವಿಂಗ್ ಪ್ರಧಾನ ಕಚೇರಿ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ. ದಾಳಿಕೋರರು ಮುಖ್ಯ ದ್ವಾರಕ್ಕೆ ವಾಹನವನ್ನು ಡಿಕ್ಕಿ ಹೊಡೆಸಿ ಒಳನುಗ್ಗಿದ್ದಾರೆ. ಹ್ಯಾಂಡ್ ಗ್ರೆನೇಡ್‌ಗಳನ್ನು ಎಸೆದಿದ್ದಾರೆ. ಅದರಿಂದಾಗಿ ಹಲವು ಸ್ಫೋಟಗಳು ಸಂಭವಿಸಿವೆ. ಭದ್ರತಾ ಪಡೆಯು ಆರು ಉಗ್ರರನ್ನು ಕೊಂದಿದ್ದು, ಒಬ್ಬನನ್ನು ಸೆರೆಹಿಡಿದಿದೆ. ದಾಳಿಯಲ್ಲಿ ನಾಲ್ವರು ಸೈನಿಕರು ಮೃತಪಟ್ಟಿದ್ದಾರೆ.

## ಮಕ್ಕಳ ಆರೋಗ್ಯಕ್ಕಾಗಿ ಪೋಲಿಯೋ ಹನಿ ಹಾಕಿಸಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮುಂದಿನ ಪೀಳಿಗೆಯ ಆರೋಗ್ಯ ರಕ್ಷಿಸಲು 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹನಿ ಹಾಕಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಭಾನುವಾರ ತಾಲ್ಲೂಕು ಆಡಳಿತ, ವೈದ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ, ಲಯನ್ ಸೇವಾ ಸಂಸ್ಥೆ, ರೋಟರಿ ಸಂಸ್ಥೆ ವತಿಯಿಂದ ನಡೆದ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಭಾರತವು ಈಗಾಗಲೇ ಪೋಲಿಯೋ ಮುಕ್ತ ರಾಷ್ಟ್ರವಾಗಿದ್ದರೂ ಖಾಯಿಲೆ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ. ವಿದೇಶಗಳಿಂದ ಬರುವವರಿಂದ ಸೋಂಕು ಹರಡುವ ಅಪಾಯವಿರುವ ಕಾರಣ ಪ್ರತಿಯೊಬ್ಬ ಪೋಷಕರು ಲಸಿಕಾ ಅಭಿಯಾನಕ್ಕೆ ಸಹಕರಿಸುವಂತೆ ಮನವಿ ಮಾಡಿದರು.

ತಾಲ್ಲೂಕು ಪೋಲಿಯೋ ಮುಕ್ತವಾಗಿದ್ದು, ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷ ದೊಳಗಿನ ಎಲ್ಲಾ ಮಕ್ಕಳಿಗೂ ಪೋಲಿಯೋ ಹನಿಯನ್ನು ತಪ್ಪದೇ ಹಾಕಿಸಬೇಕು. ಆರೋಗ್ಯ ಕಾರ್ಯಕರ್ತರು, ಪೋಷಕರು ಯಾವ ಮಗುವು ಹನಿಯಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು. ಆ ಮೂಲಕ ಪೋಲಿಯೋ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸಬೇಕು. ನಗರ ಪ್ರದೇಶದಲ್ಲಿ 2,443 ಹಾಗು ಗ್ರಾಮೀಣ ಭಾಗದಲ್ಲಿ 11,747 ಸೇರಿ 14,190 ಮಕ್ಕಳನ್ನು ಗುರುತಿಸಲಾಗಿದ್ದು, ಒಟ್ಟು 133 ಪೋಲಿಯೊ ಬೂತ್ ಸ್ಥಾಪಿಸಲಾಗಿದೆ. 542 ಸಿಬ್ಬಂದಿ ಮತ್ತು 26 ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದಾರೆಂದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಬಳಸಿಕೊಂಡು ಆರೋಗ್ಯ ಸೇವೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಆರೋಗ್ಯ ಸೇವೆಗೆ ಹೆಚ್ಚಿನ ಗಮನ ಹರಿಸಲಾಗಿದೆ. ಮಾಸಿಕ ಪ್ರಯೋಗ ಶಾಲೆಯಲ್ಲಿ 12,000ಕ್ಕೂ ಹೆಚ್ಚು ರಕ್ತ ಪರೀಕ್ಷೆ ಮತ್ತು ಸುಮಾರು 2000 ಹೆಚ್ಚು ಡಿಜಿಟಲ್ ಎಕ್ಸ್‌ರೆಗಳನ್ನು ಮಾಡಲಾಗುತ್ತಿದೆ. ಮಕ್ಕಳಿಗೆ ಲಸಿಕೆ ನೀಡಲು ಅನುಕೂಲವಾಗಲೆಂದು ಪ್ರತ್ಯೇಕ ಲಸಿಕಾ ಕೇಂದ್ರ ತೆರೆಯಲಾಗಿದೆ. ತಾಲ್ಲೂಕು ಆಸ್ಪತ್ರೆಯಲ್ಲಿ ಇಬ್ಬರು ಪ್ರಸೂತಿ ತಜ್ಞರಿದ್ದು ಮಾಸಿಕ 70 ಹೆರಿಗೆ ಆಗುತ್ತಿವೆ. ಕೊಠಡಿಗಳ ಲಭ್ಯತೆ ಅಗತ್ಯತೆ ಹೆಚ್ಚಾಗಿದ್ದು ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆಂದು ತಿಳಿಸಿದರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಬಿ.ಆರ್. ಯುವರಾಜ್ ಮಾತನಾಡಿದರು. ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ಪಿ.ತೇಜಸ್ವಿನಿ, ಡಾ|| ಮುರುಳಿ, ಡಾ||ಪ್ರವೀಣ್, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಅನಿತಾ, ಟಿಪಿಸಿಎಂಎಸ್ ಅಧ್ಯಕ್ಷ ಹೆಚ್.ಆರ್.ವೆಂಕಟೇಶಮೂರ್ತಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಾಲು ನಾಗಸಮುದ್ರ, ಮೋಹನ್ ಕಲ್ಕೆರೆ ಇತರರಿದ್ದರು.

## ಮೋದಿಗೆ ಸೆಷಲ್ ಗಾರ್ಡಿಯನ್ ಆಫ್ ದಿ ಬ್ಲೂ ಹಾರಿಜಾನ್ ಪ್ರಶಸ್ತಿ

• ಪ್ರಜೋದಯ ವರದಿ



**ವಿಕ್ಟೋರಿಯ:** ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೆಷಲ್ಸ್ ದೇಶದ ಅತ್ಯುನ್ನತ ಪ್ರಶಸ್ತಿ ಗಾರ್ಡಿಯನ್ ಆಫ್ ದಿ ಬ್ಲೂ ಹಾರಿಜಾನ್ ಅನ್ನು ನೀಡಿ ಗೌರವಿಸಲಾಗಿದೆ.

ಪರಿಸರ ಸಂರಕ್ಷಣೆ ಮತ್ತು ಸಣ್ಣ ದ್ವೀಪ ಅಭಿವೃದ್ಧಿಶೀಲ ರಾಷ್ಟ್ರಗಳ ಆಕಾಂಕ್ಷೆಗಳನ್ನು ಮುನ್ನಡೆಸುವ ದೃಢ ಬದ್ಧತೆಗಾಗಿ ಸೆಷಲ್ ದೇಶವು ಭಾರತದ ಪ್ರಧಾನಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇದು ಪ್ರಧಾನಿ ಮೋದಿ ಅವರಿಗೆ ದೊರೆತ 34ನೇ ಅಂತರ ರಾಷ್ಟ್ರೀಯ ಪ್ರಶಸ್ತಿಯಾಗಿದೆ.

ಸೆಷಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಈ ಸಂದರ್ಭದಲ್ಲಿ ಸೆಷಲ್ಸ್ ದೇಶಕ್ಕೆ ಧನ್ಯವಾದ ಸಲ್ಲಿಸಿರುವ ಪ್ರಧಾನಿ ಮೋದಿ, ಈ ಪ್ರಶಸ್ತಿಯನ್ನು ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುತ್ತಿರುವ ದೇಶಗಳಿಗೆ ಅರ್ಪಿಸುತ್ತೇನೆಂದು ಹೇಳಿದ್ದಾರೆ.

ನಾನು ಈ ಗೌರವವನ್ನು ವಿನಮ್ರವಾಗಿ ಸ್ವೀಕರಿಸುತ್ತೇನೆ. ಹವಾಮಾನ ಬದಲಾವಣೆಯ ಸವಾಲನ್ನು ಎದುರಿಸುತ್ತಿರುವ ಎಲ್ಲಾ ದೇಶಗಳಿಗೂ ಅರ್ಪಿಸುತ್ತೇನೆ. ಮುಂದಿನ ಪೀಳಿಗೆಗಾಗಿ ಪರಸರದ ಸಂರಕ್ಷಣೆಯು ನಮ್ಮ ಜವಾಬ್ದಾರಿಯಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿ ಈ ಸವಾಲು ಗಳನ್ನು ಎದುರಿಸಬೇಕೆಂದಿದ್ದಾರೆ. ನಮ್ಮ ಗ್ರಹವನ್ನು ಹಸಿರು ಹಾಗೂ ಸುಸ್ಥಿರಕ್ಕಾಗಿ ಅಗತ್ಯವಿರುವ ಎಲ್ಲವನ್ನು ಮಾಡಲು ಭಾರತ ಸಿದ್ಧವಾಗಿದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

## ಪೋಲಿಯೋ ಮುಕ್ತ ಭಾರತಕ್ಕಾಗಿ ಕೈಜೋಡಿಸಿ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಲಸಿಕಾ ಕಾರ್ಯಕ್ರಮಕ್ಕೆ ಶಾಸಕ ಎ.ಮಂಜು ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿ ಗ್ರಾಮದಲ್ಲಿಯೂ ಇಂದು ಪೋಲಿಯೋ ಲಸಿಕೆ ಅಭಿಯಾನ ಮಾಡುತ್ತಿದ್ದು, ಪ್ರತಿ ಮಗುವಿಗೂ ಎರಡು ಹನಿ ಪೋಲಿಯೋ ಲಸಿಕೆ ಹಾಕಿಸಿ ಪೋಲಿಯೋ ಮುಕ್ತ ಭಾರತಕ್ಕಾಗಿ ಕೈಜೋಡಿಸುವಂತೆ ಪ್ರತಿಯೊಬ್ಬ ಪೋಷಕರಿಗೂ ಮನವಿ ಮಾಡಿ, ಪ್ರತಿ ಮಗು ಪೋಲಿಯೋ ಲಸಿಕೆ ಹಾಕಿಸಿಕೊಳ್ಳುವಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿ, ಪೋಲಿಯೋ ವೈರಸ್‌ನಿಂದ ಮಕ್ಕಳ ಮೇಲಾಗುವ ಅಂಗವಿಕಲತೆಯಂತಹ ಸಮಸ್ಯೆಗಳನ್ನು ಸಂಪೂರ್ಣ ನಿರ್ಮೂಲನೆ ಮಾಡಿ ಪೋಲಿಯೋ ಮುಕ್ತ ರಾಷ್ಟವನ್ನಾಗಿ ಮಾಡಲು ಪೋಷಕರು ಸಹಕರಿಸಬೇಕೆಂದರು.

ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು ಪೋಷಕರು ತಮ್ಮ ಮಕ್ಕಳನ್ನು ಸ್ವತಃ ಲಸಿಕಾ ಕೇಂದ್ರಗಳಿಗೆ ಕರೆದುಕೊಂಡು ಬಂದು ಲಸಿಕೆ ಹಾಕಿಸುವುವಂತೆ ಮನವಿ ಮಾಡುತ್ತಾ, ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಸಿಬ್ಬಂದಿ, ಶಾಲಾ ಶಿಕ್ಷಕರು, ಮಕ್ಕಳ ಮನೆ ಶಿಕ್ಷಕಿಯರು ಹಾಗೂ ಅಂಗನವಾಡಿ ಶಿಕ್ಷಕಿಯರಿಗೆ ಸಂಪೂರ್ಣ ಸಹಕಾರ ನೀಡುವಂತೆ ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ||ಪುಷ್ಪಲತಾ, ರಾಮನಾಥಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ||ದಿವ್ಯ, ಆಶಾ ಸುಗಮಕಾರರಾದ ಕವಿತಾ, ಪೋಷಕರು, ಮಕ್ಕಳು, ಮುಖಂಡರು, ಆರೋಗ್ಯ ಕಾರ್ಯ ಕರ್ತರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಸಿಬ್ಬಂದಿ ಉಪಸ್ಥಿತರಿದ್ದರು.

### ಯಸಳೂರಿನಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ

## ಅಂಬೇಡ್ಕರ್ ಒಂದು ಸಮುದಾಯಕ್ಕಾಗಿ ಸಂವಿಧಾನ ರಚಿಸಿಲ್ಲ

• ಪ್ರಜೋದಯ ವರದಿ



**ಸಕಲೇಶಪುರ:** ಅಂಬೇಡ್ಕರ್ ಯಾವುದೇ ಒಂದು ಸಮುದಾಯಕ್ಕಾಗಿ ಮಾತ್ರ ಸಂವಿಧಾನ ರಚಿಸಿಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ, ಸಮಾನ ಅವಕಾಶ ಹಾಗೂ ಘನತೆಯ ಬದುಕು ದೊರೆಯುವಂತೆ ಸಂವಿಧಾನ ರೂಪಿಸಿದ ಮಹಾನ್ ವ್ಯಕ್ತಿ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಯಸಳೂರು ಹೋಬಳಿ ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಇಂದು ಸಾಮಾನ್ಯ ವ್ಯಕ್ತಿಯೊಬ್ಬರು ಜನಪ್ರತಿನಿಧಿಯಾಗಲು ಸಾಧ್ಯವಾಗಿರುವುದು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಕಲ್ಪಿಸಿದ ಸಮಾನ ಅವಕಾಶ ಮತ್ತು ಮೀಸಲಾತಿ ವ್ಯವಸ್ಥೆಯಿಂದಾಗಿದೆ. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಹಾಗೂ ಆಸ್ತಿಯಲ್ಲಿ ಸಮಾನ ಹಕ್ಕು ದೊರೆಯುವಂತೆ ಮಾಡುವಲ್ಲಿ ಅವರ ಕೊಡುಗೆ ಅಪಾರ. ಕಾರ್ಮಿಕರ ಹಕ್ಕುಗಳ ರಕ್ಷಣೆಯಲ್ಲೂ ಅವರು ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆಂದು ಹೇಳಿದರು.

ಯಸಳೂರಿನಲ್ಲಿ ಎಲ್ಲಾ ಸಮುದಾಯಗಳ ಸಹಕಾರದೊಂದಿಗೆ ಪ್ರಮುಖ ಸ್ಥಳದಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣವಾಗುತ್ತಿರುವುದು ನಿಜವಾದ ಪ್ರಜಾಪ್ರಭುತ್ವದ ಸಂಕೇತವಾಗಿದೆ. ಪುತ್ಥಳಿ ಶೀಘ್ರ ಪೂರ್ಣಗೊಂಡು ಯುವಜನತೆಗೆ ಅಂಬೇಡ್ಕರ್ ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ಸಂದೇಶ ತಲುಪುವಂತಾಗಲಿ ಎಂದು ಆಶಿಸಿದರು.

ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವು ಕೇವಲ ಸ್ಮಾರಕ ನಿರ್ಮಾಣವಲ್ಲ. ಅವರ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಮಾನವೀಯ ಮೌಲ್ಯಗಳನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಕಾರ್ಯವಾಗಿದೆ. ಜಾತಿ–ಧರ್ಮದ ಭೇದಭಾವವನ್ನು ತೊರೆದು ಎಲ್ಲರೂ ಸಮಾನರು ಎಂಬ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಕಲೇಶಪುರ, ಆಲೂರು ಹಾಗೂ ಹಾನಬಾಳು ಬಳಿಕ ಇದೀಗ ಯಸಳೂರಿನಲ್ಲೂ ಅಂಬೇಡ್ಕರ್ ಪ್ರತಿಮೆ ನಿರ್ಮಾಣವಾಗುತ್ತಿರುವುದು ಸಂತಸದ ಸಂಗತಿ. ಪ್ರತಿಮೆಯೊಂದಿಗೆ ಅವರ ವಿಚಾರಧಾರೆಯೂ ಹಳ್ಳಿಹಳ್ಳಿಗೂ ತಲುಪಬೇಕೆಂದು ತಿಳಿಸಿದ ಅವರು, ಪುತ್ಥಳಿ ನಿರ್ಮಾಣ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರ ಕಾರ್ಯವನ್ನು ಶ್ಲಾಘಿಸಿದರು.

ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಸಮಿತಿ ಅಧ್ಯಕ್ಷ ಎ.ಎಸ್.ಈರಯ್ಯ, ಬಿಎಸ್‌ಪಿ ಜಿಲ್ಲಾ ಅಧ್ಯಕ್ಷ ಲಕ್ಷ್ಮಣ್ ಕೀರ್ತಿ, ವೀರಶೈವ ಸಮಾಜದ ಮುಖಂಡ ಮುರುಗೇಂದ್ರ, ಮುಸ್ಲಿಂ ಸಮಾಜದ ಮುಖಂಡ ಸಿರಾಜ್ ಅಹಮದ್, ಬೌದ್ಧ ಉಪಾಸಕ ಜಯವರ್ಧನ್, ಸಮಿತಿ ಉಪಾಧ್ಯಕ್ಷ ಯೋಗೇಶ್, ಕಾರ್ಯದರ್ಶಿ ಮಂಜಯ್ಯ, ಪದಾಧಿಕಾರಿಗಳು, ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಬಾಬರ್ ಜನತಾ ಪಕ್ಷ: ಬಿಜೆಪಿ ವಿರುದ್ಧ ಉದ್ಧವ್ ಠಾಕ್ರೆ ವಾಗ್ದಾಳಿ

• ಪ್ರಜೋದಯ ವರದಿ

**ಪರ್ಭಾನಿ:** ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ವಿರುದ್ಧ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ರಾಮಮಂದಿರ ದೇವಾಲಯವನ್ನು ರಾಜಕೀಯ ಲಾಭಕ್ಕಾಗಿ ಬಿಜೆಪಿ ಬಳಸಿಕೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಬಿಜೆಪಿಗೆ ಬಾಬರ್ ಜನತಾ ಪಕ್ಷ ಎಂಬ ಹಣೆಪಟ್ಟಿ ಕಟ್ಟಿದರು. ಬಾಬರ್ ರಾಮಮಂದಿರವನ್ನು ಕೆಡವಿದರು. ಆದರೆ, ಹೊಸದಾಗಿ ನಿರ್ಮಿಸಲಾದ ರಾಮ ದೇಗುಲವನ್ನು ಬಾಬರ್ ಜನತಾ ಪಕ್ಷ ಲೂಟಿ ಮಾಡುತ್ತಿದೆ. ಹಾಗಾದರೆ ಅವುಗಳ ನಡುವೆ ವ್ಯತ್ಯಾಸವೇನು ಎಂದು ಪ್ರಶ್ನಿಸಿದ್ದಾರೆ.

ಈ ಸಂದರ್ಭದಲ್ಲಿ ಇತ್ತೀಚೆಗೆ ಪಕ್ಷಾಂತರಗೊಂಡ ಪಕ್ಷದ ಆರು ಸಂಸದರನ್ನು ತಕ್ಷಣವೇ ಅನರ್ಹಗೊಳಿಸಬೇಕೆಂದು ಆಗ್ರಹಿಸಿದ್ದಾರೆ.

## ವಿಶ್ವದ ಗಮನ ಸೆಳೆದಿರುವ ಬೆಂಗಳೂರು ಕೆಂಪೇಗೌಡರ ದೂರದೃಷ್ಟಿಗೆ ಸಾಕ್ಷಿ

• ಪ್ರಜೋದಯ ವರದಿ



**ಅರಕಲಗೂಡು:** ಯಾವುದೇ ಒಂದು ನಗರ ಸಾಗರ ತೀರದಲ್ಲಿದ್ದು ಬೆಳವಣಿಗೆ ಕಾಣುವುದು ಸಹಜ, ಆದರೆ ಸಮುದ್ರ ತೀರ ಇಲ್ಲವೇ ಪ್ರಮುಖ ನದಿ ತೀರದಲ್ಲಿಲ್ಲದಿದ್ದರೂ ವಿಶ್ವದ ಪ್ರಮುಖ ನಗರಗಳಲ್ಲಿ ಒಂದಾಗಿ ಮಹಾನ್ ಸಿಲಿಕಾನ್ ಸಿಟಿಯಾಗಿ ಬೆಂಗಳೂರು ಬೆಳೆದಿರುವುದು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ ಹಾಗೂ ಆಡಳಿತ ಸಾಮರ್ಥ್ಯಕ್ಕೆ ಸಾಕ್ಷಿ ಎಂದು ಶಾಸಕ ಎ.ಮಂಜು ಅವರು ಹೇಳಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಆಯೋಜಿಸಿದ್ದನಾಡಪ್ರಭು ಕೆಂಪೇಗೌಡ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮಹಾನಗರವಾಗಿ ಬೆಳೆದಿದೆ. ನಗರ ಬೆಳವಣಿಗೆಗೆ ನದಿ ಅಥವಾ ಸಮುದ್ರ ತೀರದ ಅನುಕೂಲತೆ ಪ್ರಮುಖವಾಗಿರುತ್ತದೆ. ಅಂತಹ ಭೌಗೋಳಿಕ ಅನುಕೂಲತೆಗಳಿಲ್ಲದಿದ್ದರೂ ಬೆಂಗಳೂರು ವಿಶ್ವದ ಗಮನ ಸೆಳೆಯುವ ನಗರವಾಗಿ ರೂಪುಗೊಂಡಿ ರುವುದು ಕೆಂಪೇಗೌಡರ ದೂರ ದೃಷ್ಟಿಯ ಫಲವಾಗಿದೆ ಎಂದು ತಿಳಿಸಿದರು.

ಇಂದು ಸರ್ಕಾರಗಳು ಮಹನೀಯರ ಜಯಂತಿಗಳನ್ನು ಆಚರಿಸುತ್ತಿವೆ. ಆದರೆ ಜಯಂತಿ ಗಳು ಕೇವಲ ಜಾತಿ ಅಥವಾ ಸಮುದಾಯಕ್ಕೆ ಸೀಮಿತವಾಗಬಾರದು. ಮಹನೀಯರ ಜೀವನ, ಸಾಧನೆ ಹಾಗೂ ಆದರ್ಶಗಳನ್ನು ಸಮಾಜಕ್ಕೆ ಪರಿಚಯಿಸುವ ವೇದಿಕೆಯಾಗಬೇಕೆಂದು ಹೇಳಿದರು.

ಕೆಂಪೇಗೌಡರು ಸಾವಿರಾರು ಕೆರೆಗಳನ್ನು ನಿರ್ಮಿಸುವ ಮೂಲಕ ನೀರಿನ ಸಂರಕ್ಷಣೆಗೆ ಆದ್ಯತೆ ನೀಡಿದ್ದರು. ಎಲ್ಲಾ ಜಾತಿ, ಧರ್ಮ ಮತ್ತು ವರ್ಗದ ಜನರು ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸುವಂತಹ ಆಡಳಿತ ನಡೆಸಿದ್ದರು. ಅವರ ಸಾಧನೆಗಳು ಇಂದಿನ ಪೀಳಿಗೆಗೆ ಮಾದರಿಯಾಗಿವೆ ಎಂದರು.

ತಾಲ್ಲೂಕು ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಹೆಚ್.ಎಸ್.ರಶ್ಮಿ ಮಾತನಾಡಿ, ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟುಕೊಂಡಿದ್ದ ಕೆಂಪೇಗೌಡರು ನಾಡು ಕಟ್ಟುವ ಕಾರ್ಯಕ್ಕೆ ಮಹತ್ವದ ಕೊಡುಗೆ ನೀಡಿದರು. ತಮ್ಮ ಸ್ವಾರ್ಥಕ್ಕಾಗಿ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಿದ ಅಪರೂಪದ ನಾಯಕರು ಎಂದು ಬಣ್ಣಿಸಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಮಾತನಾಡಿ, ಮಹನೀಯರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ತತ್ವಗಳು ಮತ್ತು ಮೌಲ್ಯಗಳನ್ನು ಪಾಲಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಹೇಳಿದರು.

ಕೆಸವತ್ತೂರು ಮಠದ ಶ್ರೀ ಬಸವ ರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಬೆಂಗಳೂರು ನಗರವು ಇಂದು ವಿಶ್ವದಾದ್ಯಂತ ಹೆಸರುವಾಸಿಯಾಗಿರುವುದು ಕೆಂಪೇಗೌಡರ ದೂರದೃಷ್ಟಿಯ ಪರಿಣಾಮವಾಗಿದೆ. ನಗರದ ನಾಲ್ಕು ದಿಕ್ಕುಗಳಲ್ಲಿ ಗೋಪುರಗಳನ್ನು ನಿರ್ಮಿಸಿ ಗಡಿಗಳನ್ನು ಗುರುತಿಸಿದ ಅವರು ಸುಸಂಘಟಿತ ನಗರ ನಿರ್ಮಾಣಕ್ಕೆ ನಾಂದಿ ಹಾಡಿದರು. ಜನರ ಕಲ್ಯಾಣವೇ ಆಡಳಿತದ ಮುಖ್ಯ ಉದ್ದೇಶವಾಗಿರಬೇಕೆಂಬ ಧ್ಯೇಯದೊಂದಿಗೆ ಕಾರ್ಯನಿರ್ವಹಿಸಿದ ಅವರು ಹಳ್ಳಿಗಳ ಅಭಿವೃದ್ಧಿ ಹಾಗೂ ನಗರಗಳ ಬೆಳವಣಿಗೆ ಎರಡಕ್ಕೂ ಸಮಾನ ಆದ್ಯತೆ ನೀಡಿದ್ದರೆಂದು ಹೇಳಿದರು.

ಚಿಲುಮೆ ಮಠದ ಶ್ರೀ ಜಯದೇವ ಸ್ವಾಮೀಜಿ, ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ತಾಲ್ಲೂಕು ಪಂಚಾಯಿತಿ ಇಒ ಶ್ರೀನಿವಾಸ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಮುಖಂಡರಾದ ಚೌಡೇಗೌಡ, ನರಸೇಗೌಡ, ಕೃಷ್ಣೇಗೌಡ, ಸತೀಶ್, ಪುಟ್ಟರಾಜು, ಸಂಜೀವ್ ಕುಮಾರ್, ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ನಾಡಪ್ರಭು ಕೆಂಪೇಗೌಡರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಮತ್ತು ಪಾಲಕರನ್ನು ಸನ್ಮಾನಿಸಲಾಯಿತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ವೀರಗಾಸೆ ನೃತ್ಯ ಸೇರಿ ಮಂಗಳವಾದ್ಯದೊಂಗೆ ಬೆಳ್ಳಿ ರಥದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಕೂರಿಸಿ ಭವ್ಯ ಮೆರವಣಿಗೆ ನಡೆಯಿತು.

## ಎರಡು ಹನಿ ಪೋಲಿಯೋ ಮಕ್ಕಳ ಭವಿಷ್ಯಕ್ಕೆ ಮುನ್ನುಡಿ

• ಪ್ರಜೋದಯ ವರದಿ



**ಆಲೂರು:** ಪೋಲಿಯೋ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲ, ಕೇವಲ ಲಸಿಕೆ ಮಾತ್ರವೇ ಪರಿಹಾರ ಎಂದು ಶಾಸಕ ಮಂಜು ಅವರು ಹೇಳಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಪೋಲಿಯೋ ವೈರಸ್‌ನಿಂದ ಹರಡುವ ಒಂದು ಸಾಂಕ್ರಾಮಿಕ ರೋಗವಾಗಿದೆ. ಇದು ವಿಶೇಷವಾಗಿ 5 ವರ್ಷದೊಳಗಿನ ಮಕ್ಕಳ ಮೇಲೆ ದಾಳಿ ಮಾಡಿ, ಅವರನ್ನು ಶಾಶ್ವತವಾಗಿ ಪಾರ್ಶ್ವವಾಯು (ಅಂಗವಿಕಲತೆ)ಗೆ ತುತ್ತಾಗುವಂತೆ ಮಾಡುತ್ತದೆ. ಅದನ್ನು ತಡೆಗಟ್ಟಲು ಮಕ್ಕಳಿಗೆ ನೀಡುವ ಎರಡು ಹನಿ ಲಸಿಕೆಯು ಜೀವಕ್ಕೆ ಹನಿ ಎಂದರೆ ತಪ್ಪಾಗಲಾರದು ಎಂದರು.

0 ರಿಂದ 5 ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಈ ಲಸಿಕೆ ನೀಡುವುದು ಕಡ್ಡಾಯ. ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ ರಾಷ್ಟ್ರೀಯ ಲಸಿಕಾ ದಿನಗಳಂದು ಈ ಅಭಿಯಾನ ನಡೆಯುತ್ತದೆ. ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ವಿಮಾನ ನಿಲ್ದಾಣಗಳಲ್ಲಿ ಲಸಿಕಾ ಬೂತ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಸಾರ್ವಜನಿಕರು, ಮಕ್ಕಳ ಪೋಷಕರು ತಮ್ಮ ಮಕ್ಕಳಿಗೆ ತಪ್ಪದೆ ಪೋಲಿಯೋ ಲಸಿಕೆ ಹಾಕಿಸುವಂತೆ ಕರೆ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ||ನಿಸಾರ್ ಫಾತೀಮಾ ಅವರು ಮಾತನಾಡಿ, ಪೋಲಿಯೋ ಬಗ್ಗೆ ಜನರಲ್ಲಿ ಜಾಗೃತಿ ಬಂದಿದ್ದು, ನೂರಕ್ಕೆ ನೂರರಷ್ಟು ಪೋಲಿಯೋ ಮುಕ್ತವಾಗಬೇಕೆಂಬುದು ನಮ್ಮ ಗುರಿಯಾಗಿದೆ. ಜನರು ಉತ್ಸಾಹದಿಂದ ಲಸಿಕಾ ಕೇಂದ್ರಗಳಿಗೆ ಮಕ್ಕಳನ್ನು ಕರೆತಂದು ಲಸಿಕೆ ಹಾಕಿಸುತ್ತಿರುವುದು ಗಣನೀಯ ಪ್ರಗತಿ ಕಂಡುಬಂದಿದೆ. ಜನರು ಕೂಡ ನಮ್ಮೊಂದಿಗೆ ಕೈಜೋಡಿಸುವ ಮೂಲಕ ಮುಂದೆ ಮಗುವು ಪೋಲಿಯೋದಿಂದ ವಂಚಿತರಾಗಿ ಅಂಗವಿಕಲರಾಗಿ ನರಳಬಾರದು ಎಂದರು

ಆಡಳಿತ ವೈದ್ಯಾಧಿಕಾರಿ ಡಾ||ಕಿಶೋರ್, ಬಿಜೆಪಿ ವಕ್ತಾರ ಮಾವನೂರು ಮೋಹನ್, ಜೆಸಿಬಿ ಲೋಕೇಶ್, ಆಸ್ಪತ್ರೆ ಸಿಬ್ಬಂದಿ ಹಾಗು ಪೋಷಕರು ಉಪಸ್ಥಿತರಿದ್ದರು.

## ಚಗಚಗೆರೆಯಲ್ಲಿ ಕೆಂಪೇಗೌಡರ ಅದ್ದೂರಿ ಜಯಂತಿ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ಗಂಡಸಿ ಹೋಬಳಿ ಚಗಚಗೆರೆ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ಅದ್ದೂರಿ ಮೆರವಣಿಗೆ ಏರ್ಪಡಿಸಲಾಗಿತ್ತು.

ವಿವಿಧ ಬಗೆಯ ಪುಷ್ಪ ಹಾಗು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಬೆಳ್ಳಿ ರಥದ ಮೇಲೆ ಕೆಂಪೇಗೌಡರ ಭಾವಚಿತ್ರ ಮೆರವಣಿಗೆ ನಡೆಯಿತು. ಗ್ರಾಮದ ಮುಖಂಡರ ಪುಷ್ಪಾರ್ಚನೆ ನಂತರ ವಾದ್ಯಗೋಷ್ಠಿ, ಡಿಜೆ, ಕಲಾತಂಡಗಳ ಕುಣಿತ, ಭಾರೀ ಮದ್ದು ಗುಂಡಿನ ಸುರಿಮಳೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿತು.

ಶಿಕ್ಷಕ ಶಿವಸ್ವಾಮಿ ಅವರು ಮಾತನಾಡಿ, ದೂರದೃಷ್ಟಿಯ ನಾಯಕ ಕೆಂಪೇಗೌಡರ ಕನಸಿನ ನಗರ ಬೆಂಗಳೂರು ಇಂದು ವಿಶ್ವವೇ ತಿರುಗಿ ನೋಡುವ ರೀತಿಯಲ್ಲಿ ಬೆಳವಣಿಗೆ ಕಂಡಿದೆ. ಎಲ್ಲಾ ಸಮುದಾಯದವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಗರವನ್ನು ಕಟ್ಟಿದ ಅವರು ಕೆರೆಕಟ್ಟೆ, ಉದ್ಯಾನ ಹಾಗು ಬೃಹತ್ ಕಟ್ಟಡಗಳ ಮೂಲಕ ಸುಭದ್ರ ನಗರ ನಿರ್ಮಿಸಿದರು. 500 ವರ್ಷಗಳ ಹಿಂದೆ ಅವರು ಕೈಗೊಂಡ ಅಭಿವೃದ್ಧಿ ಕಾಮಗಾರಿ ಇಂದಿಗೂ ಜೀವಂತವಾಗಿವೆ ಎಂದರು.

ಎಲ್ಲಾ ಜಾತಿ ಜನಾಂಗಗಳ ಕಸುಬುಗಳಿಗೆ ಅನುಗುಣವಾಗಿ ಕಸುಬುಗಳಿಗೆ ಆರ್ಥಿಕ ಶಕ್ತಿ ತುಂಬುವ ದೃಷ್ಟಿಯಿಂದ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸಿ ಜೀವನೋಪಾಯಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

ಅವರ ದೂರದೃಷ್ಟಿಯ ಫಲವೇ ಕೋಟ್ಯಾಂತರ ಜನರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದರು.

## ಭಾವನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯ ಚುಟುಕು ಸಾಹಿತ್ಯಕ್ಕಿದೆ

• ಪ್ರಜೋದಯ ವರದಿ



**ಹಾಸನ:** ಚುಟುಕು ಸಾಹಿತ್ಯವು ಕನ್ನಡ ಸಾಹಿತ್ಯದ ಅತ್ಯಂತ ಸುಂದರ ಮತ್ತು ಪರಿಣಾಮಕಾರಿ ಪ್ರಕಾರಗಳಲ್ಲಿ ಒಂದಾಗಿದೆ. ಕೆಲವೇ ಸಾಲುಗಳಲ್ಲಿ ಆಳವಾದ ಜೀವನತತ್ತ್ವ, ಹಾಸ್ಯ, ನೀತಿ, ಅನುಭವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯ ಇದಕ್ಕಿದೆ. ಆದ್ದರಿಂದ ಚುಟುಕು ಸಾಹಿತ್ಯ ಬದುಕಿಗೆ ಲಾಲಿತ್ಯ, ಸೊಬಗು, ಸಾರ್ಥಕತೆ ಮತ್ತು ಸಿಹಿತನವನ್ನು ನೀಡುತ್ತದೆಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ಅವರು ತಿಳಿಸಿದರು.

ನಗರದ ಎ.ವಿ.ಕೆ.ಕಾಲೇಜಿನ ಸಭಾಂಗಣದಲ್ಲಿ ಡಾ.ರತ್ನ ಹಾಲಪ್ಪಗೌಡ ಸರ್ವಾಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಚೊಚ್ಚಲ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚುಟುಕುಗಳು ಓದುಗರ ಮನಸ್ಸನ್ನು ಚಿಂತನೆಗೆ ಹಚ್ಚು ತ್ತವೆ. ಬದುಕಿನ ಸತ್ಯಗಳನ್ನು ಸರಳ ಪದಗಳಲ್ಲಿ ತಿಳಿಸುತ್ತವೆ. ಕೆಲವೊಮ್ಮೆ ನಗಿಸುತ್ತವೆ, ಮತ್ತೊಮ್ಮೆ ಎಚ್ಚರಿ ಸುತ್ತವೆ. ನೀತಿ, ಪ್ರೀತಿ, ಸ್ನೇಹ, ಪ್ರಕೃತಿ, ಸಮಾಜ, ಸಮಯದ ಮಹತ್ವ ಇತ್ಯಾದಿ ವಿಷಯಗಳನ್ನು ಚುಟುಕ್ಕಾಗಿ ತಿಳಿಸುವ ಮೂಲಕ ಜೀವನವನ್ನು ಉತ್ತಮಗೊಳಿಸಲು ಪ್ರೇರೇಪಿಸುತ್ತವೆ ಎಂದರು.

ಇಂದಿನ ವೇಗದ ಯುಗದಲ್ಲಿ ದೀರ್ಘ ಸಾಹಿತ್ಯ ಓದಲು ಸಮಯವಿಲ್ಲದವರಿಗೂ ಚುಟುಕು ಸಾಹಿತ್ಯ ಬಹಳ ಉಪಯುಕ್ತವಾಗಿದೆ. ಕಡಿಮೆ ಸಮಯದಲ್ಲಿ ಹೆಚ್ಚು ವಿಚಾರಗಳನ್ನು ಮನಸ್ಸಿಗೆ ತಲುಪಿಸುವ ಶಕ್ತಿ ಇದಕ್ಕಿದೆ. ಆದ್ದರಿಂದ, ಚುಟುಕು ಸಾಹಿತ್ಯ ಬದುಕಿಗೆ ಲಾಲಿತ್ಯ ಎಂಬ ಮಾತು ಅಕ್ಷರಶಃ ಸತ್ಯ ಎಂದರು.

ಆಚಾರ್ಯ ಕಾಮರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಆರ್. ಆದರ್ಶ ಅವರು ಅನುಭವದ ಅಮೃತ –ಚುಟುಕುವಿನ ಬಟ್ಟಲಲ್ಲಿ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಜಿಲ್ಲಾ ಲೇಖಕಿಯರ ಬಳಗದ ಅಧ್ಯಕ್ಷೆ ರಾಜೇಶ್ವರಿ ಹುಲ್ಲೇನಹಳ್ಳಿಯವರು ಚುಟುಕು ಚುರುಕು–ನಗುತ ನಾಟುವ ಸಾಹಿತ್ಯ ಕುರಿತು ವಿಚಾರ ಮಂಡಿಸಿದರು. ಶಿವಮೊಗ್ಗಾ ಕರ್ನಾಟಕ ಸಂಘದ ಪೂರ್ವಾಧ್ಯಕ್ಷರಾದ ಎಂ. ಎನ್.ಸುಂದರ್‌ರಾಜ್ ಅವರು ಬಿಂದು ಸಿಂದುವಾದತೆ ಚುಟುಕುವಿನಲ್ಲಿ ಜೀವನ ದರ್ಶನ ವಿಷಯ ಕುರಿತು ಅಭಿಪ್ರಾಯ ಮಂಡಿಸಿದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಾ.ನಂ.ಲೋಕೇಶ್, ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ರತ್ನ ಹಾಲಪ್ಪಗೌಡ,ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಜಿಲ್ಲಾ ಗೌರವಾಧ್ಯಕ್ಷ ರವಿನಾಕಲಗೂಡು, ಬೆಳಕು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಇತರರು ಉಪಸ್ಥಿತರಿದ್ದರು.

## ಎಸ್‌ಐಆರ್ ಮೂಲಕ 46 ಸಾವಿರ ಮತದಾರರ ಹೆಸರು ಅಳಿಸಿದ ಚುನಾವಣಾ ಆಯೋಗ

• ಪ್ರಜೋದಯ ವರದಿ

**ಐಜ್ವಾಲ್:** ಮಿಜೋರಾಂನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪೂರ್ಣಗೊಂಡಿದ್ದು, 46,000ಕ್ಕೂ ಹೆಚ್ಚು ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೇ 20 ರಂದು ಆರಂಭವಾಗಿದ್ದ ಎಸ್‌ಐಆರ್ ಎಲ್ಲಾ ಎಣಿಕೆ ನಮೂನೆಗಳನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸು ವುದರೊಂದಿಗೆ ಭಾನುವಾರ (ಜೂ.28) ಮುಕ್ತಾಯಗೊಂಡಿದೆ ಎಂದು ಮಿಜೋರಾಂನ ಜಂಟಿ ಮುಖ್ಯ ಚುನಾವಣಾ ಅಧಿಕಾರಿ ಎಥೆಲ್ ರೋಥಂಗ್‌ಪುಯಿ ಪಿಟಿಐಗೆ ತಿಳಿಸಿದ್ದಾರೆ.

ಮೃತಪಟ್ಟವರು, ಪತ್ತೆಹಚ್ಚಲಾಗದವರು, ಶಾಶ್ವತ ವಲಸೆ ಮತ್ತು ನಕಲಿ ದಾಖಲಾತಿಗಳು ಸೇರಿ ವಿವಿಧ ಕಾರಣಗಳಿಗಾಗಿ ಒಟ್ಟು 46,191 ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸ ಲಾಗಿದೆಂದು ಹೇಳಿದ್ದಾರೆ.

ಹೆಸರುಅಳಿಸಲಾದವರಲ್ಲಿ 21,290 ಜನರು ಮೃತಪಟ್ಟಿದ್ದರೆ, 8,352 ಜನರನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ, 13,992 ಜನರು ಶಾಶ್ವತವಾಗಿ ಇತರೆ ರಾಜ್ಯಗಳಿಗೆ ಅಥವಾ ವಿದೇಶಗಳಿಗೆ ಸ್ಥಳಾಂತರಗೊಂಡಿದ್ದಾರೆ ಮತ್ತು 2,245 ಜನರು ನಕಲಿ ದಾಖಲಾತಿಗಳನ್ನು ಹೊಂದಿರುವುದು ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಧಾರ್ಮಿಕ ನಂಬಿಕೆಗಳ ಕಾರಣದಿಂದಾಗಿ 312 ಅರ್ಹ ಮತದಾರರು ನೋಂದಣಿ ಅಥವಾ ಮರು ನೋಂದಣಿಗೆನಿರಾಕರಿಸಿದ್ದಾರೆಂದು ರೋಥಂಗ್‌ಪುಯಿ ಹೇಳಿದ್ದಾರೆ. ಎಸ್‌ಐಆರ್ ಬಳಿಕ ಈಗ ಮಿಜೋರಾಂನ ಮತದಾರರ ಸಂಖ್ಯೆ 8,28,877ರಷ್ಟಾಗಿದೆ. ಶೇ. 94.72 ಮತದಾರರ ಹೆಸರು ಉಳಿಸಲಾಗಿದೆ. 2025ರ ಮತಪಟ್ಟಿಯಲ್ಲಿ 8.75 ಲಕ್ಷ ಮತದಾರರಿದ್ದರು.

# ರಕ್ಷಣೆ ಸ್ವಾವಲಂಬನೆ ದೇಶಕ್ಕೆ ಹೆಮ್ಮೆ

• ಪ್ರಜೋದಯ ವರದಿ



**ನವದೆಹಲಿ :** ನೌಕೆಗಳ ವಿನ್ಯಾಸದಿಂದ ಹಿಡಿದು ತಯಾರಿಕೆಯವರೆಗಿನ ಪ್ರತಿಯೊಂದು ಹಂತವೂ ಭಾರತದಲ್ಲೇ ನಡೆದಿದೆ. ಇದು ನಮ್ಮ ರಕ್ಷಣಾ ಉತ್ಪಾದನಾ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೆಮ್ಮೆಯಿಂದ ನುಡಿದರು.

ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್‌ನ 135ನೇ ಸಂಚಿಕೆಯ ಮೂಲಕ ದೇಶದ ಜನರನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, 2026ರ ಮೊದಲಾರ್ಧ ಮುಕ್ತಾಯದ ಹಂತಕ್ಕೆ ಬಂದಿದ್ದು, ಈ ಆರು ತಿಂಗಳುಗಳಲ್ಲಿ ಭಾರತವು ರಾಷ್ಟ್ರೀಯ ಭದ್ರತೆ ಹಾಗೂ ಸ್ವಾವ ಲಂಬನೆ (ಆತ್ಮನಿರ್ಭರತೆ) ಕ್ಷೇತ್ರದಲ್ಲಿ ಜಗತ್ತೇ ಬೆರಗಾಗು ವಂತಹ ಐತಿಹಾಸಿಕ ಸಾಧನೆಗಳನ್ನು ಮಾಡಿದೆ ಎಂದು ಬಣ್ಣಿಸಿದ್ದಾರೆ.

ಇತ್ತೀಚಿನ ಕೋಲ್ಕತಾ ಭೇಟಿಯನ್ನು ಸ್ಮರಿಸಿದ ಮೋದಿ ಅವರು, ಭಾರತೀಯ ನೌಕಾಪಡೆಗೆ ಸಂಪೂರ್ಣ ಸ್ವದೇಶಿ ನಿರ್ಮಿತ ಐಎನ್‌ಎಸ್ ದುನಾಗಿರಿ, ಐಎನ್‌ಎಸ್ ಸಂಶೋಧಕ್ ಮತ್ತು ಐಎನ್‌ಎಸ್ ಅಗ್ರಯ್ ಯುದ್ಧ ನೌಕೆ ಗಳನ್ನು ಸೇರ್ಪಡೆಗೊಳಿಸಿರುವುದು ದೇಶದ ಹೆಮ್ಮೆಯನ್ನು ಹೆಚ್ಚಿಸಿದೆ. ಜೊತೆಗೆ, ಜೂನ್ ತಿಂಗಳಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯಶಸ್ವಿಯಾಗಿ ಪರೀಕ್ಷಿಸಿದ ದೂರಗಾಮಿ ಭೂ-ದಾಳಿ ಕ್ರೂಸ್ ಕ್ಷಿಪಣಿ ದೇಶ ದ ರಕ್ಷಣಾ ವಲಯದ ಮತ್ತೊಂದು ಮೈಲಿಗಲ್ಲು ಎಂದರು.

ಭಾರತದ ನಾಗರಿಕ ಮತ್ತು ರಕ್ಷಣಾ ವಿಮಾನಯಾನ ರಂಗದಲ್ಲಿ ಮೇಡ್ ಇನ್ ಇಂಡಿಯಾ ಸಿ-295 (ಅ-295) ಸಾರಿಗೆ ವಿಮಾನದ ಯಶಸ್ವಿ ಹಾರಾಟ ಹೊಸ ಕ್ರಾಂತಿ ಸೃಷ್ಟಿಸಿದೆ. ಈ ಮಾದರಿಯ 40 ವಿಮಾನಗಳನ್ನು ಭಾರತದಲ್ಲೇ ಉತ್ಪಾದಿಸಲಾಗುತ್ತಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು.

**ಚಿನ್ನದ ಖರೀದಿ ನಿಲ್ಲಿಸಿದ ಜನತೆಗೆ ಧನ್ಯವಾದ**

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನಲೆಯಲ್ಲಿ, ದೇಶದ ಆರ್ಥಿಕ ಹಿತದೃಷ್ಟಿಯಿಂದ ಸದ್ಯಕ್ಕೆ ಚಿನ್ನದ ಖರೀದಿಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವಂತೆ ಪ್ರಧಾನಿ ಮೋದಿ ದೇಶದ ಜನತೆಗೆ ಕರೆ ನೀಡಿದ್ದರು. ಈ ಕರೆಗೆ ದೇಶಾದ್ಯಂತ ಸಾರ್ವಜನಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ನನ್ನ ಮನವಿಯನ್ನು ಪುರಸ್ಕರಿಸಿ, ದೇಶದ ಆರ್ಥಿಕತೆಗೆ ಸಹಕರಿಸಿದ ಪ್ರತಿಯೊಬ್ಬ ನಾಗರಿಕನಿಗೂ ನಾನು ಕೃತಜ್ಞನಾಗಿದ್ದೇನೆ. ನೂರಾರು ಕುಟುಂಬಗಳು ಈ ಕುರಿತು ತಮ್ಮ ಸಕಾರಾತ್ಮಕ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಂಡಿದ್ದಾರೆಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದರು.

ಇಂಧನ ಉಳಿತಾಯ ಹಾಗೂ ಮಾಲಿನ್ಯ ನಿಯಂತ್ರಣದ ನಿಟ್ಟಿನಲ್ಲಿ ಜನರು ಸ್ವಯಂಪ್ರೇರಿತರಾಗಿ ಕಾರ್ ಪೂಲಿಂಗ್(ಒಂದೇ ಮಾರ್ಗದಲ್ಲಿ ಚಲಿಸುವವರು ಒಂದೇ ವಾಹನ ಬಳಸುವುದು) ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿರುವುದನ್ನು ಶ್ಲಾಘಿಸಿದ ಅವರು, ಒಂದೇ ದಿಕ್ಕಿನಲ್ಲಿ ನಿತ್ಯ ಕಚೇರಿ ಅಥವಾ ಕೆಲಸಕ್ಕೆ ತೆರಳುವ ಸಾರ್ವಜನಿಕರು ಪ್ರತ್ಯೇಕ ವಾಹನಗಳ ಬದಲಿಗೆ ಒಟ್ಟಾಗಿ ಪ್ರಯಾಣಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಅಗ್ಗದ ಮತ್ತು ಕೈಗೆಟುಕುವ ಸಾಮಾಜಿಕ ಭದ್ರತಾ ಯೋಜನೆಗಳು ದೇಶದ ಕೋಟ್ಯಾಂತರ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ರಕ್ಷಾ ಕವಚ ಒದಗಿಸುತ್ತಿವೆ ಎಂದು ಪ್ರಧಾನಿ ಮೋದಿ ಈ ಸಂದರ್ಭದಲ್ಲಿ ಪುನರುಚ್ಚರಿಸಿದರು.

# ಆರೋಗ್ಯಕರ ದೇಶ ನಿರ್ಮಾಣ ಅವಶ್ಯ

## ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ

• ಪ್ರಜೋದಯ ವರದಿ

**ಬೆಂಗಳೂರು :** ಮಕ್ಕಳ ಭವಿಷ್ಯಕ್ಕಾಗಿ ಸರ್ಕಾರ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ರೂಪಿಸಿದ್ದು, ರಾಜ್ಯದ ಎಲ್ಲಾ ಭಾಗದ ಪೋಷಕರು ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಭಾನುವಾರ ಮಾತನಾಡಿದ ಅವರು, ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಬಹಳ ಬುದ್ಧಿವಂತರು. ನನ್ನ ಮೊಮ್ಮಗಳಿಗೆ ಒಂದು ತಿಂಗಳು. ಹೀಗಾಗಿ ಈ ಕಾರ್ಯಕ್ರಮಕ್ಕೆ ನನ್ನ ಮನೆಯನ್ನೇ ಆಯ್ಕೆ ಮಾಡಿದ್ದಾರೆ. ಮುಖ್ಯಮಂತ್ರಿ ಮನೆಯಿಂದ ಈ ಅಭಿಯಾನ ಆರಂಭವಾಗಲಿ ಎಂಬುದು ಖಾದರ್ ಅವರ ಸದಾಶಯ. ಹೀಗಾಗಿ ನನ್ನ ಮನೆಯಲ್ಲೇ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲು ತೀರ್ಮಾನಿಸಿದ್ದಾರೆಂದು ತಿಳಿಸಿದರು.



ಕಾರ್ಯಕ್ರಮದಲ್ಲಿ 36,686 ಲಸಿಕಾ ಕೇಂದ್ರಗಳು, 988 ಸಂಚಾರಿ ಕೇಂದ್ರಗಳು, 2,125 ಪಾಯಿಂಟ್‌ಗಳು ಸೇರಿ ಒಟ್ಟು 1,14,213 ಲಸಿಕಾ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. ಅನೇಕ ಎನ್‌ಜಿಒಗಳು ಅಭಿಯಾನಕ್ಕೆ ಕೈಜೋಡಿಸಿವೆ. ದೇಶ ಸೇವೆಯ ಈ ಕಾರ್ಯಕ್ರಮಕ್ಕೆ ಸಹಕಾರ ನೀಡಿರುವ ಎಲ್ಲರಿಗೂ ತುಂಬು ಹೃದಯದಿಂದ ಶುಭ ಕೋರುವೆ ಎಂದರು.

60.84 ಲಕ್ಷ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ಸರ್ಕಾರ ತೀರ್ಮಾನಿಸಿದೆ. 1972ರಲ್ಲಿ ಇಂದಿರಾ ಗಾಂಧಿ ಅವರು ದೇಶದ ಮಕ್ಕಳು ಆರೋಗ್ಯವಾಗಿ ಇರಬೇಕೆಂದು ಪೋಲಿಯೋ ಲಸಿಕೆ ಕಾರ್ಯಕ್ರಮ ಮಾಡಿದರು. ರಾಜೀವ್ ಗಾಂಧಿ ಅವರ ಕಾಲದಲ್ಲಿ ಇದು ಅಭಿ ಯಾನವಾಗಿ ಪ್ರಾರಂಭವಾಯಿತು. ಮನಮೋಹನ್ ಸಿಂಗ್ ಅವರ ಕಾಲದಲ್ಲಿ ಭಾರತ ಪೋಲಿಯೋ ಮುಕ್ತ ದೇಶವಾಯಿತು ಎಂದು ತಿಳಿಸಿದರು.

ನಮ್ಮ ದೇಶ ಬಲಿಷ್ಠವಾಗಿದೆ. ನೆರೆ ರಾಷ್ಟ್ರಗಳಿಂದ ಮತ್ತೆ ಪೋಲಿಯೋ ಬಾರದಂತೆ ತಡೆಯಲು ನಾವು ಈ ಅಭಿಯಾನ ಮಾಡುತ್ತಿದ್ದೇವೆ. ವಿಶ್ವ ಪೋಲಿಯೋ ಲಸಿಕಾ ದಿನದ ಹಿನ್ನಲೆಯಲ್ಲಿ ನಮ್ಮ ಸರ್ಕಾರ ಇಂದು ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಲಸಿಕೆ ನೀಡಿ ಯಾವುದೇ ಮಕ್ಕಳು ಅಂಗವೈಕಲ್ಯಕ್ಕೆ ಒಳಗಾಗಬಾರದೆಂದು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆಂದರು.

ಆರೋಗ್ಯಕರ ಕರ್ನಾಟಕ ನಿರ್ಮಾಣಕ್ಕೆ ಪ್ರತಿ ಹಂತದಲ್ಲಿ ಕಾರ್ಯಕ್ರಮ ರೂಪಿಸಿದೆ. ನಮ್ಮ ಸರ್ಕಾರೇತರ ಸಂಸ್ಥೆಗಳು, ಅಧಿಕಾರಿಗಳು ಉತ್ತಮ ಸಹಕಾರ ನೀಡುತ್ತಿದ್ದು, ಅವರಿಗೆ ಅಭಿನಂದನೆಗಳು. ಈ ದೇಶವನ್ನು ಪೋಲಿಯೋ ಮುಕ್ತ ಮಾಡಲಾಗಿದೆ. ಖಾದರ್ ಅವರಿಗೆ ಅಪಾರ ಅನುಭವವಿದೆ. ಅವರು ಈ ಜವಾಬ್ದಾರಿ ಹೊತ್ತಿದ್ದಾರೆ. ನಮ್ಮ ರಾಜ್ಯದ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಬಲಿಷ್ಠವಾಗಿದ್ದು, ಹೊರಗಿನಿಂದ ಜನರು ಇಲ್ಲಿನ ಹೆಲ್ತ್ ಟೂರಿಸಂಗೆ ಬರುತ್ತಿದ್ದಾರೆ. ಆರೋಗ್ಯ ಸೇವೆಗೆ ನಮ್ಮ ರಾಜ್ಯಕ್ಕೆ ಬರುತ್ತಿದ್ದಾರೆಂದು ತಿಳಿಸಿದರು.

ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರನ್ನು ತಯಾರು ಮಾಡುತ್ತೇವೆ. 1.07 ಲಕ್ಷ ಆರೋಗ್ಯ ಸೇವೆ ಸಿಬ್ಬಂದಿ ತಯಾರು ಮಾಡುತ್ತಿದ್ದೇವೆ. ಇಡೀ ಭಾರತದಲ್ಲಿ ಇಷ್ಟು ಗುಣಮಟ್ಟದ ವೈದ್ಯಕೀಯ ಸೇವೆ ಎಲ್ಲೂ ಇಲ್ಲ. ನಮ್ಮ ರಾಜ್ಯದ ಕಾಲೇಜುಗಳಲ್ಲಿ ಓದಿ ವೈದ್ಯರಾದವರು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರ ಆರೋಗ್ಯ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಸ್ತಾವನೆಗಳಿಗೆ ಆದ್ಯತೆ ಮೇರೆಗೆ ಒಪ್ಪಿಗೆ ನೀಡುತ್ತಿದ್ದೇವೆಂದು ಹೇಳಿದರು.

# ವಿಬಿ-ಜಿ ರಾಮ್ ಜಿನಿಂದ ರಾಜ್ಯಗಳ ಮೇಲೆ ಆರ್ಥಿಕ ಹೊರ

• ಪ್ರಜೋದಯ ವರದಿ

**ನವದೆಹಲಿ:** ನರೇಗಾ ಯೋಜನೆಯ ಬದಲಾದ ಸ್ವರೂಪವಾದ ವಿಬಿ-ಜಿ ರಾಮ್ ಜಿ ಬಗ್ಗೆ ಹಲವು ರಾಜ್ಯಗಳು ಕಳವಳ ವ್ಯಕ್ತಪಡಿಸಿವೆ. ಮನರೇಗಾ ಸಂವಿಧಾನದ ಉದ್ಯೋಗದ ಹಕ್ಕನ್ನು ಖಾತರಿಪಡಿಸುತ್ತಿತ್ತು. ಆದರೆ, ನೂತನ ಕಾನೂನು ಕೇಂದ್ರೀಕರಣವನ್ನು ಖಾತರಿಪಡಿಸುತ್ತದೆ ಮತ್ತು ರಾಜ್ಯಗಳ ಮೇಲಿನ ಆರ್ಥಿಕ ಹೊರೆಯನ್ನು ಹೆಚ್ಚಿಸಲಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ಮೋದಿ ನೇತೃತ್ವದ ಸರ್ಕಾರವು ಹಗೆತನ ಮತ್ತು ಸಂಕುಚಿತ ಮನೋಭಾವವನ್ನು ಹೊಂದಿದೆ. ಗ್ರಾಮೀಣಾ ಭಿವೃದ್ಧಿ ಕುರಿತ ಸಂಸದೀಯ ಸ್ಥಾಯಿ ಸಮಿತಿ, ರಾಜ್ಯ ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸದೆ ಮನರೇಗಾ ಯೋಜನೆಯನ್ನು ರದ್ದು ಮಾಡಿದೆ ಎಂದು ಎಕ್ಸ್‌ನಲ್ಲಿ ಹೇಳಿದ್ದಾರೆ.

ವಿಬಿಜಿ ರಾಮ್ ಜಿ ಯೋಜನೆಯು ಜುಲೈ 1ರಿಂದ ಜಾರಿಯಾಗುತ್ತಿದ್ದು, ಈ ಬಗ್ಗೆ ಹಲವು ರಾಜ್ಯಗಳು ಕಳವಳ ವ್ಯಕ್ತಪಡಿಸುತ್ತಿವೆ. ಬಿಜೆಪಿ ಅಧಿಕಾರದಲ್ಲಿ ಇರುವ ಮಧ್ಯಪ್ರದೇಶ, ಬಿಹಾರ, ಉತ್ತರಾಖಂಡ ರಾಜ್ಯಗಳಲ್ಲಿ ಭಾರಿ ವಿರೋಧ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ.

ಇತರೆ ನಾಲ್ಕು ರಾಜ್ಯ ಸರ್ಕಾರಗಳು, ಕೃಷಿ ಚಟುವಟಿಕೆಗಳು ಗರಿಗೆದರಿರುವ ಸಂದರ್ಭದಲ್ಲಿ ಯೋಜನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಕ್ಕೆ ವಿರೋಧ ವ್ಯಕ್ತಪಡಿಸಿವೆ. ಕನಿಷ್ಠ ಐದು ರಾಜ್ಯಗಳು ಗ್ರಾಮೀಣ ಕೃಷಿ ಕಾರ್ಮಿಕರ ಕೂಲಿ ಹೆಚ್ಚಳಕ್ಕೆ ಒತ್ತಾಯಿಸಿವೆ ಎಂದಿದ್ದಾರೆ. ಗ್ರಾಮೀಣ ಅಭಿವೃದ್ಧಿ ಸಚಿವರ (ಶಿವರಾಜ್ ಸಿಂಗ್ ಚೌಹಾಣ್) ರಾಜ್ಯ, ಮಧ್ಯಪ್ರದೇಶವೂ ಮೋದಿ ಸರ್ಕಾರದ ನೂತನ ಯೋಜನೆ ಬಗ್ಗೆ ಕಳವಳ ವ್ಯಕ್ತಪಡಿಸಿದೆ ಎಂದು ಹೇಳಿದ್ದಾರೆ.

# ಪ್ರಥಮ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ ಯಶಸ್ವಿ

» **ಮೊದಲನೇ ಪುಟದಿಂದ**

ಆಚಾರ್ಯ ಕಾಮರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಆರ್. ಆದರ್ಶ ಅವರು ಅನುಭವದ ಅಮೃತ-ಚುಟುಕುವಿನ ಬಟ್ಟಲಲ್ಲಿ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಜಿಲ್ಲಾ ಲೇಖಕಿಯರ ಬಳಗದ ಅಧ್ಯಕ್ಷೆ ರಾಜೇಶ್ವರಿ ಹುಲ್ಲೇನಹಳ್ಳಿಯವರು ಅಚುಟುಕು ಚುರುಕು- ನಗುತ ನಾಟುವ ಸಾಹಿತ್ಯಟಿ ಕುರಿತು ವಿಚಾರ ಮಂಡಿಸಿದರು. ಮೌನ ಮುರಿದ ಮಹಿಳಾ ಧ್ವನಿ ಗೋಷ್ಠಿಯಲ್ಲಿ ಪ್ರಗತಿಪರ ಚಿಂತಕಿ ಸ.ವೆಂ.ಪೂರ್ಣಿಮಾ ಗಂಭೀರ ಸಮಸ್ಯೆ ಪ್ರಸ್ತಾಪಿಸಿದ್ದಲ್ಲದೆ, ಪರಿಹಾರ ಕುರಿತು ಬೆಳಕು ಚೆಲ್ಲಿದರು.

ಶಿವಮೊಗ್ಗಾ ಕರ್ನಾಟಕ ಸಂಘದ ಪೂರ್ವಾಧ್ಯಕ್ಷ ಎಂ.ಎನ್. ಸುಂದರ್‌ರಾಜ್ ಅವರು ಅಬಿಂದು ಸಿಂದುವಾದಂತೆ, ಚುಟುಕುವಿನಲ್ಲಿ ಜೀವನ ದರ್ಶನ ವಿಷಯ ಕುರಿತು ಅಭಿಪ್ರಾಯ ಮಂಡಿಸಿದರು. ಸಾಹಿತಿ ಸೌಮ್ಯ ಬಾನಾಡಿ ಅವರು ಚುಟುಕು: ಸಣ್ಣ ಸಾಲುಗಳ ದೊಡ್ಡದನಿ ಎಂಬ ವಿಚಯದಡಿ ಉಪನ್ಯಾಸ ನೀಡಿದರು.

ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಾ.ನಂ.ಲೋಕೇಶ್, ಕೇಂದ್ರ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಜಿ.ಆರ್.ಅರಸ್, ಸಮ್ಮೇಳನದ ಸರ್ವಾಧ್ಯಕ್ಷೆ ಡಾ. ರತ್ನಹಾಲಪ್ಪಗೌಡ, ಸಮ್ಮೇಳನ ಸಂಚಾಲಕ ರವಿ ನಾಕಲಗೂಡು, ಬೆಳಕು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಸೇರಿ ಅನೇಕರು ಉಪಸ್ಥಿತರಿದ್ದರು. ಸಾಹಿತಿ ಪದ್ಮಮೂರ್ತಿ, ಕಾತ್ಯಾಯಿನಿ ತೆವರೀಮಠ್, ಸುಧಾ ಕಲ್ಯಾಣ್, ಹರೀಶ್ ಕುಮಾರ್ ಮತ್ತಿತರರು ಹಾಜರಿದ್ದರು.

# ನಿವೃತ್ತ ಶಿಕ್ಷಣಾಧಿಕಾರಿ ತಮ್ಮಣ್ಣಗೌಡರಿಗೆ ಗೌರವ ಡಾಕ್ಟರೇಟ್

• ಪ್ರಜೋದಯ ವರದಿ

**ಹಾಸನ:** ಶಿಕ್ಷಣ ಮತ್ತು ಸಮಾಜ ಸೇವಾ ಕ್ಷೇತ್ರ, ಕ್ಷೇತ್ರದಿಂದ ತಮಿಳುನಾಡಿನ ಏಷಿಯಾ ಇಂಟರ್‌ನ್ಯಾಷನಲ್ ಕಲ್ಚರ್‌ರಿಸರ್ಚ್ ಅಕಾಡೆಮಿ ಕೊಡಮಾಡುವ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಭಾಜನರಾಗಿದ್ದಾರೆ.

ನಮ್ಮ ಶಾಲೆ ಮತ್ತು ನಮ್ಮೂರ ಶಾಲೆ ಎಂಬ ಪರಿಕಲ್ಪನೆಗಳ ಮೂಲಕ ಪ್ರತೀ ವರ್ಷವೂ ಹತ್ತನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡುವ ಮೂಲಕ ತಮ್ಮಣ್ಣ ಗೌಡ ಬಡ ಮಕ್ಕಳಿಗೆ ನೆರವಾಗಿದ್ದರು. ಕಂದಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಲವು ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದ ಅವರು ಶಿಕ್ಷಣಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ.




ತಮಿಳುನಾಡಿನ ಹೊಸೂರಿನಲ್ಲಿರುವ ಟಿ.ಜಿ.ಐ. ಗ್ರ್ಯಾಂಡ್ ಫಾರ್ಚೂನಾ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಸಂಸ್ಥೆಯ ಗೌರವಾಧ್ಯಕ್ಷ ಡಾ. ಕೃಷ್ಣಮೂರ್ತಿ ಸ್ವಾಮೀಜಿ, ಕರಾಟೆ ಪಟು ಎ.ಪಿ.ಶ್ರೀನಾಥ್, ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ನಿರ್ದೇಶಕ ಎಸ್.ಟಿ.ಸೊಂಬೇಗೌಡ, ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಡಾ. ಸಂಗನಬಸಪ್ಪ ಬಿರಾದಾರ್, ಮನೋಹರ, ಡಾ. ಅರುಣ್ ಚಿನ್ನದುರೈ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸುಶೀಲಮ್ಮ ಅವರು ಸಮಾರಂಭದಲ್ಲಿ ಹಾಜರಿದ್ದರು.

# ಯೋಗದಿಂದ ಆರೋಗ್ಯ-ಆತ್ಮವಿಶ್ವಾಸ ವೃದ್ಧಿ

» **ಮೊದಲನೇ ಪುಟದಿಂದ**

ಆಧುನಿಕ ತಂತ್ರಜ್ಞಾನಗಳ ಅತಿಯಾದ ಬಳಕೆಯಿಂದ ಉಂಟಾಗುವ ದೈಹಿಕ ಹಾಗು ಮಾನಸಿಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯೋಗ ಪರಿಣಾಮಕಾರಿಯಾಗಿದೆ. ವಿದ್ಯಾರ್ಥಿಗಳು ಪ್ರತಿದಿನ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಾಧನೆ ಮಾಡಲು ಸಾಧ್ಯವೆಂದರು.

ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಶಾಲಾ ಹಾಗು ಕಾಲೇಜು ವಿದ್ಯಾರ್ಥಿಗಳು ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿ ತೀರ್ಪುಗಾರರ ಮೆಚ್ಚುಗೆ ಗಳಿಸಿದರು. ವಿವಿಧ ವಯೋಮಾನದ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗಿದ್ದು, ಉತ್ತಮ ಪ್ರದರ್ಶನ ನೀಡಿದ ಸ್ಪರ್ಧಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ಪ್ರದಾನಿಸಲಾಗುವುದೆಂದು ಆಯೋಜಕರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಯೋಗ ಸಂಸ್ಥೆಯ ಅಧ್ಯಕ್ಷ ಕೃಷ್ಣಪ್ಪ ವಹಿಸಿದ್ದರು. ಉಪಾಧ್ಯಕ್ಷ ರಾಮಜೊಯಿಸ್, ಪ್ರಧಾನ ಕಾರ್ಯದರ್ಶಿ ನಿರಂಜನ ರಾಜ್, ಸಹ ಕಾರ್ಯದರ್ಶಿ ಮನೋಹರ್, ಸಂಸ್ಥೆಯ ಪದಾಧಿಕಾರಿಗಳು, ಯೋಗ ಶಿಕ್ಷಕರು, ಪೋಷಕರು ಹಾಗು ಸಾರ್ವಜನಿಕರು ಉಪಸ್ಥಿತರಿದ್ದರು. ಭಾನುಮತಿ ನಿರೂಪಿಸಿ ವಂದಿಸಿದರು.

# ಸೌದಿಯಲ್ಲಿ ಅರಾಮ್ಕೊ ಸಂಸ್ಥೆಯ ಹೆಲಿಕಾಪ್ಟರ್ ಪತನ: 14 ಮಂದಿ ಸಾವು

• ಪ್ರಜೋದಯ ವರದಿ

**ರಿಯಾದ್:** ಸೌದಿ ಅರೇಬಿಯಾದ ಬೃಹತ್ ತೈಲ ಸಂಸ್ಥೆ ಅರಾಮ್ಕೊಗೆ ಸೇರಿದ ಹೆಲಿಕಾಪ್ಟರ್ ಪತನಗೊಂಡಿದ್ದು, 14 ಜನರು ಮೃತಪಟ್ಟಿದ್ದಾರೆ.

ದೇಶದ ಪೂರ್ವ ಭಾಗದ ಬೃಹತ್ ತೈಲ ಸಂಸ್ಕರಣಾ ಘಟಕ ರಾಸ್ ತನುರಾ ಬಳಿ ಹೆಲಿಕಾಪ್ಟರ್ ಪತನವಾಗಿದೆ ಎಂದು ಇಂಧನ ಸಚಿವಾಲಯವನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ವರದಿ ಮಾಡಿದೆ. ಅಪಘಾತದಲ್ಲಿ ಮೃತಪಟ್ಟ 14 ಮಂದಿಯೂ ಸೌದಿ ನಿವಾಸಿಗಳಾಗಿದ್ದು, ಪತನದ ಕಾರಣ ಪತ್ತೆಗೆ ತನಿಖೆ ನಡೆಸಲಾಗುತ್ತಿದೆಂದು ಅದು ತಿಳಿಸಿದೆ.

ಆರಾಮ್ಕೊ ಸಂಸ್ಥೆಯು ಸೌದಿ ಅರೇಬಿಯಾದಲ್ಲಿ 60ಕ್ಕೂ ಅಧಿಕ ವಿಮಾನ ಮತ್ತು 300ಕ್ಕೂ ಅಧಿಕ ಹೆಲಿಕಾಪ್ಟರ್ ಗಳನ್ನು ಕಾರ್ಯಾಚರಿಸುತ್ತದೆ. ಇರಾನ್ ದಾಳಿ ಮತ್ತು ಹೊರ್ಮುಜ್ ಉದ್ವಿಗ್ನತೆ ನಡುವೆ ಗಲ್ಫ್ ದೇಶಗಳು ತೈಲ ಉತ್ಪಾದನೆ ಹೆಚ್ಚಿಸುವ ಒತ್ತಡದಲ್ಲಿರುವಾಗಲೇ ಈ ಅವಘಡ ನಡೆದಿದೆ.

ಈ ಅಪಘಾತಕ್ಕೆ ಕ್ಷಿಪಣಿ ದಾಳಿ ಕಾರಣವಿರಬಹುದೇ ಎಂಬ ಅನುಮಾನಕ್ಕೆ ಯಾವುದೇ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಪಶ್ಚಿಮ ಏಷ್ಯಾ ಯುದ್ಧದ ಸಂದರ್ಭ ಇರಾನ್, ಗಲ್ಫ್‌ನ ತೈಲಾಗಾರಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ, ಡ್ರೋನ್ ದಾಳಿ ನಡೆಸುತ್ತಿತ್ತು.

ರಾಸ್ ತನುರಾ ಪಶ್ಚಿಮ ಏಷ್ಯಾದ ಅತಿದೊಡ್ಡ ಸಂಸ್ಕರಣಾಗಾರಗಳಲ್ಲಿ ಒಂದಾಗಿದ್ದು, ದಿನಕ್ಕೆ 5,50,000 ಬ್ಯಾರೆಲ್‌ಗಳ ಸಾಮರ್ಥ್ಯ ಹೊಂದಿದೆ. ಇದು ಸೌದಿ ಅರೇಬಿಯಾದ ಇಂಧನ ವಲಯಕ್ಕೆ ನಿರ್ಣಾಯಕವಾಗಿದೆ.

# ಪೋಲಿಯೋ ಮುಕ್ತ ದೇಶಕ್ಕೆ ಎಲ್ಲರ ಸಹಕಾರ ಅಗತ್ಯ

• ಪ್ರಜೋದಯ ವರದಿ

**ಸಕಲೇಶಪುರ:** ದೇಶವನ್ನು ಸಂಪೂರ್ಣ ಪೋಲಿಯೋ ಮುಕ್ತವಾಗಿಡಲು ಸರ್ಕಾರದೊಂದಿಗೆ ಸಾರ್ವಜನಿಕರು, ಕಾಫಿ ತೋಟದ ಮಾಲೀಕರು, ಆರೋಗ್ಯ ಸಿಬ್ಬಂದಿ ಹಾಗೂ ವಿವಿಧ ಸಂಘ-ಸಂಸ್ಥೆಗಳು ಕೈಜೋಡಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಕ್ರಾಫರ್ಡ್ ಆಸ್ಪತ್ರೆ ಆವರಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಲೆನಾಡು ಭಾಗದ ಕಾಫಿ ತೋಟಗಳಲ್ಲಿ ಸಾವಿರಾರು ವಲಸೆ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಅವರ ಮಕ್ಕಳೂ ಸೇರಿ ಐದು ವರ್ಷ ದೊಳಗಿನ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ತೋಟದ ಮಾಲೀಕರು ವಿಶೇಷ ಕಾಳಜಿ ವಹಿಸಬೇಕೆಂದು ಮನವಿ ಮಾಡಿದರು.



ಪೋಲಿಯೋ ಹನಿ ಮಗುವಿನ ಆರೋಗ್ಯ ರಕ್ಷಣೆಗೆ ಅತ್ಯಂತ ಸುರಕ್ಷಿತ ಹಾಗೂ ಪರಿಣಾಮಕಾರಿ ಲಸಿಕೆಯಾಗಿದೆ. ಪ್ರತಿಯೊಬ್ಬ ಪೋಷಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸಬೇಕು. ಆರೋಗ್ಯ ಇಲಾಖೆ ಸಿಬ್ಬಂದಿ ಮನೆಮನೆಗೆ ಹಾಗೂ ವಿವಿಧ ಕೇಂದ್ರಗಳಲ್ಲಿ ಲಸಿಕೆ ನೀಡಲಿದ್ದು, ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಇಂದಿನಿಂದ ಗ್ರಾಮೀಣ ಪ್ರದೇಶಗಳಲ್ಲಿ ಮೂರು ದಿನ ಹಾಗೂ ನಗರ ಪ್ರದೇಶಗಳಲ್ಲಿ ನಾಲ್ಕು ದಿನಗಳ ಕಾಲ ವಿಶೇಷ ಪಲ್ಸ್ ಪೋಲಿಯೋ ಅಭಿಯಾನ ನಡೆಯಲಿದೆ. ಈ ಅವಧಿಯಲ್ಲಿ ಜನನದಿಂದ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪೋಲಿಯೋ ಹನಿ ನೀಡಲಾಗುವುದು. ಯಾವುದೇ ಮಗು ತಪ್ಪಿಹೋಗದಂತೆ ಪೋಷಕರು ಸಮೀಪದ ಪೋಲಿಯೋ ಬೂತ್‌ಗೆ ಕರೆತಂದು ಲಸಿಕೆ ಹಾಕಿಸಬೇಕೆಂದು ತಿಳಿಸಿದರು.

ಆರೋಗ್ಯ ಇಲಾಖೆ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ವಯಂ ಸೇವಕರು ಮನೆಮನೆಗೆ ತೆರಳಿ ಲಸಿಕಾಕರಣದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಅವರ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸುವ ಮೂಲಕ ಪೋಲಿಯೋ ನಿರ್ಮೂಲನೆಯ ಗುರಿ ಸಾಧಿಸಲು ನೆರವಾಗಬೇಕೆಂದು ಶಾಸಕರು ಕರೆ ನೀಡಿದರು.

ರೋಟರಿ ಕ್ಲಬ್ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ವಿಶ್ವವನ್ನು ಪೋಲಿಯೋ ಮುಕ್ತ ಗೊಳಿಸುವ ಉದ್ದೇಶದಿಂದ ರೋಟರಿ ಸಂಸ್ಥೆ ಹಲವು ದಶಕಗಳಿಂದ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರದೊಂದಿಗೆ ಕೈಜೋಡಿಸಿ ಜಾಗೃತಿ ಕಾರ್ಯಕ್ರಮಗಳು ಹಾಗೂ ಲಸಿಕಾ ಅಭಿಯಾನಗಳಿಗೆ ಬೆಂಬಲ ನೀಡಲಾಗುತ್ತಿದೆ ಎಂದರು.

ಆರೋಗ್ಯ ಇಲಾಖೆ ಅಧಿಕಾರಿಗಳು, ವೈದ್ಯರು, ರೋಟರಿ ಕ್ಲಬ್ ಪದಾಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ವಿವಿಧ ಇಲಾಖೆಗಳ ಸಿಬ್ಬಂದಿ ಇದ್ದರು.

# ಆಯೋಧ್ಯೆ ದೇಣಿಗೆ ಕಳವು : ಕಠಿಣ ಶಿಕ್ಷೆಗೆ ಡಿ.ಕೆ.ಶಿವಕುಮಾರ್ ಆಗ್ರಹ

• ಪ್ರಜೋದಯ ವರದಿ

**ಬೆಂಗಳೂರು:** ಅಯೋಧ್ಯೆಯ ರಾಮಮಂದಿರಕ್ಕೆ ಭಕ್ತರು ನೀಡಿದ ದೇಣಿಗೆಯನ್ನು ದುರುಪಯೋಗಪಡಿಸಿಕೊಂಡಿರುವ ಆರೋಪಗಳು ತೀವ್ರ ಕಳವಳಕಾರಿಯಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಅಯೋಧ್ಯೆಯ ರಾಮಮಂದಿರದ ಕಾಣಿಕೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಈ ಕಾಣಿಕೆಗಳನ್ನು ಲಕ್ಷಾಂತರ ಭಾರತೀಯರು ಅಪಾರ, ಶ್ರದ್ಧೆ ಹಾಗೂ ನಿಸ್ವಾರ್ಥ ಭಾವದಿಂದ ಸಮರ್ಪಿಸಿದ್ದಾರೆ. ಪ್ರತಿಯೊಂದು ದೇಣಿಗೆಯು ಅಲ್ಲಿನ ಪವಿತ್ರ ಕಾರ್ಯದ ಮೇಲಿನ ನಂಬಿಕೆಯ ಪ್ರತೀಕವಾಗಿತ್ತು. ಆ ನಂಬಿಕೆಗೆ ದ್ರೋಹ ಬಗೆಯುವುದು ಕೇವಲ ಸಾರ್ವಜನಿಕ ವಿಶ್ವಾಸಕ್ಕೆ ಬಗೆದ ದ್ರೋಹ ಮಾತ್ರವಲ್ಲ, ಅಂತಹ ಧಾರ್ಮಿಕ ಸಂಸಗಳು ಎತ್ತಿಹಿಡಿಯಬೇಕಾದ ಮೌಲ್ಯಗಳಿಗೂ ಮಾಡಿದ ಅಪಚಾರವಾಗಿದೆ ಎಂದು ಹೇಳಿದ್ದಾರೆ.



ಪೂಜಾ ಸ್ಥಳಗಳು ಹಾಗೂ ಸಾರ್ವಜನಿಕ ದೇಣಿಗೆಗಳಿಗೆ ಸಂಬಂಧಿಸಿದ ವಿಷಯಗಳು ಪಾರದರ್ಶಕತೆ, ಸಮಗ್ರತೆ ಹೊಣೆಗಾರಿಕೆಯಿಂದ ಕೂಡಿರಬೇಕು. ಈಗ ನಡೆಯುತ್ತಿರುವ ತನಿಖೆಯು ನ್ಯಾಯಯುತ, ಸಮಗ್ರ ಹಾಗೂ ನಿಷ್ಪಕ್ಷಪಾತವಾಗಿರಬೇಕು. ತಪ್ಪಿತಸ್ಥ ವ್ಯಕ್ತಿ ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಕಾನೂನಿನ ಮುಂದೆ ತಂದು ಕಠಿಣ ಶಿಕ್ಷೆಗೆ ಗುರಿಯಾಗಿಸಬೇಕು. ಆಗ ಮಾತ್ರ ಲಕ್ಷಾಂತರ ಭಕ್ತರಲ್ಲಿ ನಂಬಿಕೆ ಮೂಡಿಸಲು ಸಾಧ್ಯ. ಧಾರ್ಮಿಕ ನಂಬಿಕೆಯನ್ನು ವೈಯಕ್ತಿಕ ಲಾಭಕ್ಕಾಗಿ ದುರುಪಯೋಗಪಡಿಸಬಾರದೆಂದು ಹೇಳಿದ್ದಾರೆ.

# ಜಿಲ್ಲೆಯ ಪತ್ರಕರ್ತರ ಒಗ್ಗಟ್ಟು ರಾಜ್ಯಕ್ಕೆ ಮಾದರಿ



» **ಮೊದಲನೇ ಪುಟದಿಂದ**

ಜಿಲ್ಲೆಯಲ್ಲಿ ಪತ್ರಕರ್ತರು ಹಾಗು ಜನಪ್ರತಿನಿಧಿಗಳು ಒಂದು ಕುಟುಂಬದ ಸದಸ್ಯರಂತೆ ಇದ್ದೇವೆ. ನಮ್ಮ ನಡುವೆ ಅವಿನಾಭಾವ ಸಂಬಂಧವಿದೆ. ಇದು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿದ ಅವರು, ಪತ್ರಕರ್ತರ ಸಂಘದ ಕಟ್ಟಡದ ನವೀಕರಣಕ್ಕೆ ಮುಂದಿನ ದಿನಗಳಲ್ಲಿ ತಮ್ಮ ನಿಧಿಯಿಂದ ಅನುದಾನ ಕೊಡುವ ಭರವಸೆ ನೀಡಿದರು.

ರಾಜ್ಯ ಸಂಘಕ್ಕೆ ಕಳಶಪ್ರಾಯವಾಗಿ ಶಿವಾನಂದ ತಗಡೂರು ಅವರು ಕೆಲಸ ಮಾಡುತ್ತಿದ್ದಾರೆ. ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ತಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳಬೇಕೆಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, ಹಾಸನ ಜಿಲ್ಲಾ ಸಂಘವು ಹಲವಾರು ಚಟುವಟಿಕೆ ಹಮ್ಮಿಕೊಳ್ಳುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ. ಮಾನಸಿಕ ಒತ್ತಡ ನಿವಾರಣೆಗೆ ಕ್ರೀಡಾಕೂಟಗಳು ಪೂರಕವಾಗಿದ್ದು, ಎಲ್ಲರೂ ಭಾಗಿಯಾಗಿರುವುದು ಸ್ವಾಗತಾರ್ಹ. ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯ ಅಲ್ಲ. ಎಲ್ಲರೂ ಒಟ್ಟಾಗಿ ಸಮಯ ಕಳೆಯಲು ಇಂತಹ ಸಂದರ್ಭಗಳು ಅವಕಾಶ ಮಾಡಿಕೊಡುತ್ತವೆಂದರು.

ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಕ್ರೀಡಾಕೂಟವನ್ನು ಸರಳವಾಗಿ ಆಯೋಜನೆ ಮಾಡಿದರೂ ಕ್ರೀಡಾ ಸಮಿತಿಯು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದೆ. ಸಂಘದ ಕಟ್ಟಡ ನವೀಕರಣಕ್ಕೆ ಅನುದಾನದ ಭರವಸೆ ನೀಡಿದ ಸಂಸದರಿಗೆ ಧನ್ಯವಾದ ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಪತ್ರಕರ್ತರು ಒಗ್ಗಟ್ಟಾಗಿ ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಸಂತೋಷದ ವಿಷಯ. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದರು. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್.ರಘುಗೌಡ, ಉದ್ಯಮಿ ಕಂಚಮಾರನಹಳ್ಳಿ ಕಾಂತರಾಜು, ಕ್ರೀಡಾ ಇಲಾಖೆ ಮತ್ತು ಯುವಜನ ಸಬಲೀಕರಣ ಇಲಾಖೆ ನಿರ್ದೇಶಕ ಆನಂದಮೂರ್ತಿ ಕ್ರೀಡಾಕೂಟಕ್ಕೆ ಶುಭ ಹಾರೈಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯರಾದ ರವಿ ನಾಕಲಗೂಡು, ಹೆತ್ತೂರು ನಾಗರಾಜ್ ಇದ್ದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿ ನಿರೂಪಿಸಿದರು. ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಿಕಾರ್ಜುನ ಕೊಚ್ಚರಗಿ ವಂದಿಸಿದರು. ಹೃದಯಾಘಾತದಿಂದ ನಿಧನರಾದ ಪತ್ರಕರ್ತ ಎನ್.ಎಸ್ ಶಂಕರ್ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

**ಕ್ರೀಡಾಕೂಟದಲ್ಲಿ ವಿಜೇತರ ವಿವರ**

30 ವರ್ಷದೊಳಗಿನವರ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಗಿರೀಶ್ ದೇಶಾಣಿ-ಪ್ರಥಮ, ಪ್ರದೀಪ್-ದ್ವಿತೀಯ ಹಾಗು ಪ್ರಶಾಂತ್-ತೃತೀಯ ಸ್ಥಾನ ಪಡೆದರು.

40 ವರ್ಷದ ಒಳಗಿನವರ ಓಟದಲ್ಲಿ ಅಭಿಜಿತ್-ಪ್ರಥಮ, ಅಭಿಲಾಷ್-ದ್ವಿತೀಯ, ಸುನಿಲ್- ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು. 50 ವರ್ಷದ ಒಳಗಿನವರ ಓಟದಲ್ಲಿ ಸ್ವರೂಪ್ ಮಳಲಿ-ಪ್ರಥಮ, ಶಿವಕುಮಾರ್ ಅರಕಲಗೂಡು-ದ್ವಿತೀಯ, ಹೆಚ್.ಆರ್.ರಾಘವೇಂದ್ರ-ತೃತೀಯ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿ ಪಿ.ಆರ್.ನಯನ-ಪ್ರಥಮ, ಶ್ರೀರಕ್ಷಾ-ದ್ವಿತೀಯ ಸ್ಥಾನ ಗಳಿಸಿದರು.

ಗುಂಡು ಎಸೆತ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಶ್ರೀರಕ್ಷಾ-ಪ್ರಥಮ, ನಯನ ಎರಡನೇ ಸ್ಥಾನಕ್ಕೆ ಭಾಜನರಾದರು.

ಪುರುಷರ ವಿಭಾಗ: (20-30 ವರ್ಷ), ಶರತ್-ಪ್ರಥಮ, ಪ್ರದೀಪ್-ದ್ವಿತೀಯ, ಸಂದೀಪ್ -ತೃತೀಯ, 30-40 ವರ್ಷ: ಅಶೋಕ್-ಪ್ರಥಮ, ಅಭಿಲಾಷ್ -ದ್ವಿತೀಯ, ಸಂಜು-ತೃತೀಯ,

40-50 ವರ್ಷ: ಶ್ರೀನಿವಾಸ್ ಉಳ್ಳಾವಳ್ಳಿ-ಪ್ರಥಮ, ವಿನಯ್-ದ್ವಿತೀಯ ಮತ್ತು ದಯಾನಂದ ಸಕಲೇಶಪುರ-ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು.

50-60 ವರ್ಷ: ಜೈ ಭೀಮ್ ಮಂಜು-ಪ್ರಥಮ, ಲಕ್ಷ್ಮಣ್ ಬೇಲೂರು-ದ್ವಿತೀಯ ಹಾಗು ವಿರೂಪಾಕ್ಷ ಅರಕಲಗೂಡು-ತೃತೀಯ, 60 ವರ್ಷ ಮೇಲ್ಪಟ್ಟವರ ಪಂದ್ಯದಲ್ಲಿ ಮೆಹಬೂಬ್ ಸಕಲೇಶಪುರ ಪ್ರಥಮ ಸ್ಥಾನ, ಪುಟ್ಟಣ್ಣ ದಿಡಗ ದ್ವಿತೀಯ ಬಹುಮಾನಕ್ಕೆ ಭಾಜನರಾದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಲೂರು ಗಣೇಶ್ ನೇತೃತ್ವದ ಹಾಸನಾಂಬ ತಂಡ ಪ್ರಥಮ, ಅಭಿಲಾಷ್ ಹೊಳೆನರಸೀಪುರ ನಾಯಕತ್ವದ ಕಾವೇರಿ ತಂಡ ದ್ವಿತೀಯ ಮತ್ತು ವಿ.ಕಿರಣ್ ನೇತೃತ್ವದ ವಾಟೆಹೊಳೆ ತಂಡ ಮೂರನೇ ಬಹುಮಾನ ಪಡೆಯಿತು. ಜಿಲ್ಲೆಯ ಎಲ್ಲಾ ಪತ್ರಕರ್ತರು ಪಂದ್ಯಾವಳಿಯಲ್ಲಿ ಭಾಗವಹಿಸಿ ಕ್ರೀಡಾ ಸ್ಫೂರ್ತಿ ಮೆರೆದರು.

# ಪ್ರತಿ ಚುನಾವಣೆ ಪ್ರಜಾಪ್ರಭುತ್ವದ ಬುನಾದಿ : ಸಿದ್ದರಾಮಯ್ಯ

## ಎಸ್‌ಐಆರ್ ಜಾಗೃತಿ ಸಮಾವೇಶದಲ್ಲಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಮೈಸೂರು:** ಪ್ರತಿ ಚುನಾವಣೆ ಪ್ರಜಾಪ್ರಭುತ್ವದ ಬುನಾದಿ. ಮತದಾನ ಎಲ್ಲಾ ವಯಸ್ಕರ ಹಕ್ಕು. ಅದನ್ನು ಮೊಟಕು ಮಾಡುವ ಅಧಿಕಾರ ಯಾರಿಗೂ ಇಲ್ಲ. ಚುನಾವಣಾ ಆಯೋಗವು ಸಾಂವಿಧಾನಿಕ ರೀತಿಯಲ್ಲಿ ನಡೆಯುವುದು ಅವರ ಜವಾಬ್ದಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ಭಾನುವಾರ ಕಾಂಗ್ರೆಸ್ ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಎಸ್‌ಐಆರ್ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನ ಉಳಿವಿಗೆ ಎಸ್‌ಐಆರ್ ಕುರಿತು ಪ್ರತಿಯೊಬ್ಬರೂ ಜಾಗೃತಿ ಆಗಬೇಕಿದೆ. ಇಲ್ಲವಾದರೆ ಈ ದೇಶ ಮತ್ತೆ ಸರ್ವಾಧಿಕಾರಕ್ಕೆ ಹೋಗಲಿದೆ. ಮತದಾರರು, ಪ್ರಜಾಪ್ರಭುತ್ವದ ಮಾರಣಹೋಮ ಆಗುತ್ತದೆ ಎಂದರು.

ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವುದು ಅವರ ಹಕ್ಕು ಕಸಿದಂತೆ. ಅರ್ಹರನ್ನು ಪಟ್ಟಿಗೆ ಸೇರಿಸುವುದು ಆಯೋಗದ ಜವಾಬ್ದಾರಿ. ಆದರೆ, 2014ರಿಂದ ಈಚೆಗೆ ಮತದಾನದ ದ್ರೋಹ ನಡೆದಿದೆ. ಈ ಪ್ರಕ್ರಿಯೆಯು ಜನಪ್ರತಿನಿಧಿಗಳ ಅಳಿವು- ಉಳಿವಿನ ಪ್ರಶ್ನೆ. ವಿಧಾನಸಭೆ ಚುನಾವಣೆಯಲ್ಲಿ ಕೃಷ್ಣಮೂರ್ತಿ ಕೇವಲ ಒಂದು ಮತದಿಂದ ಸೋತರು. ಹೀಗಾಗಿ ಪ್ರತಿ ಮತವೂ ಅಮೂಲ್ಯ. ಕಾಂಗ್ರೆಸ್ ಜಾಗೃತಿ ವಹಿಸಿ ಪ್ರತಿ ಅರ್ಹ ಮತದಾರನೂ ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳಲು ಅಭಿಯಾನ ನಡೆಸಿದೆ ಎಂದು ಹೇಳಿದರು.



ಬಿಜೆಪಿಯು ಹಿಂದುಳಿದ, ಅಲ್ಪಸಂಖ್ಯಾತ ಮತದಾರರ ಹೆಸರನ್ನು ಕೈಬಿಡಲು ಹೊರಟಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ದೇಶದಲ್ಲಿ ಶೇ.36 ಮಂದಿ ಬಿಜೆಪಿ ಪರವಾಗಿ ಮತ ಹಾಕಿದ್ದರೆ, ಉಳಿದ ಶೇ.64 ಮಂದಿ ಅವರ ವಿರುದ್ಧವಾಗಿ ಇದ್ದಾರೆ. ಅವರಲ್ಲಿ ಶೇ.10 ರಷ್ಟು ಜನರ ಹೆಸರು ಕೈಬಿಟ್ಟರೂ ಕಷ್ಟ ಆಗಲಿದೆ. ಕಾರ್ಯಕರ್ತರು ಮುಂದಿನ ಒಂದು ತಿಂಗಳು ಎಲ್ಲಾ ಕೆಲಸ ಬದಿಗೊತ್ತಿ. ನಮಗೆ ಸಂವಿಧಾನ ಬದ್ಧ ಚುನಾವಣಾ ಆಯೋಗ ಇಲ್ಲವೆಂಬುದು ನೆನಪಿನಲ್ಲಿರಲಿ ಎಂದರು.

ಸಂಸತ್ತಿನಲ್ಲಿ 2019ರಲ್ಲಿ ಬಿಜೆಪಿ 303 ಸ್ಥಾನ ಇದ್ದದ್ದು ಈಗ 240 ಕ್ಕೆ ಇಳಿದಿದೆ. ಇದಕ್ಕೆ ಅವರ ದುರಾಡಳಿತ ಕಾರಣ. ಅವರು ಎಂದೂ ಬಹುಮತ ಪಡೆದು ಅಧಿಕಾರಕ್ಕೆ ಬಂದಿಲ್ಲ. ಅವರಿಗೆ ಪ್ರಜಾಪ್ರಭುತ್ವ ಹಾಗೂ ಸಂವಿಧಾನದಲ್ಲಿ ನಂಬಿಕೆ ಇಲ್ಲ. ಅವರು ಸಂವಿಧಾನ ವಿರೋಧಿಗಳು. ಸರ್ವಾಧಿಕಾರದಲ್ಲೇ ಅವರಿಗೆ ನಂಬಿಕೆ. ಹೀಗಾಗಿಯೇ ಒಂದು ದೇಶ, ಒಂದು ಚುನಾವಣೆ ಎಂದು ಪ್ರತಿಪಾದನೆ ಮಾಡುತ್ತಿದ್ದಾರೆಂದು ದೂರಿದರು.

ಹಿಂದುಗಳಲ್ಲಿ ಜಾತಿ, ವರ್ಣಾಶ್ರಮ ಹುಟ್ಟುಹಾಕಿದ್ದು ಯಾರು, ಶೂದ್ರರನ್ನು ಶಿಕ್ಷಣ ವಂಚಿತರನ್ನಾಗಿಸಿದ್ದು ಯಾರು, ಪ್ರತಿಯೊಬ್ಬರು ನಮ್ಮ ಇತಿಹಾಸ ತಿಳಿಯಬೇಕು. ಶೂದ್ರರು ಬಿಜೆಪಿ ಜೊತೆ ಎಂದಿಗೂ ಹೋಗಬಾರದು. ಬಿಜೆಪಿ ಶೂದ್ರ ವಿರೋಧಿ. ಸಾಮಾಜಿಕ ನ್ಯಾಯದಲ್ಲಿ ಅವರಿಗೆ ನಂಬಿಕೆ ಇಲ್ಲ. ಬಿಜೆಪಿ ಸುಳ್ಳಿನ ಕಾರ್ಖಾನೆ. ಸುಳ್ಳನ್ನು ಮಾರುವುದೇ ಅವರ ಕೆಲಸವೆಂದು ಟೀಕಿಸಿದರು.

ದೇಶದಲ್ಲಿ 13 ರಾಜ್ಯ ಹಾಗೂ 3 ಕೇಂದ್ರಾಡಳಿತ ಪ್ರದೇಶದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಆಗಿದೆ. ಹರಿಯಾಣ, ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಗೆಲ್ಲಬೇಕಿತ್ತು. ಆದರೆ, ಆಗಲಿಲ್ಲ. ಕೇರಳದಲ್ಲಿ ಮಾತ್ರ, ಬಿಜೆಪಿ ಗರು ಆಟ ಆಡಲು ಕಮ್ಯುನಿಷ್ಟರು ಬಿಟ್ಟಿಲ. ಬಿಜೆಪಿಯವರು ಅಧಿಕಾರಕ್ಕಾಗಿ ಏನನ್ನೂ ಮಾಡಲು ಹೇಸದವರು. ಬ್ರಿಟಿಷರ ಕಾಲದಲ್ಲೇ ಹೆಡಗೇವಾರ್ ಅವರು ತಮ್ಮ ಆಪ್ತರನ್ನು ಇಟಲಿ, ಜರ್ಮನಿಗೆ ಕಳಿಸಿ ಸರ್ವಾಧಿಕಾರದ ಬಗ್ಗೆ ಅಧ್ಯಯನ ಮಾಡಿಸಿದ್ದರು. ಅಲ್ಲಿಂದಲೇ ಅವರಿಗೆ ಸರ್ವಾಧಿಕಾರದ ಪ್ರಯತ್ನ ನಡೆದಿದೆ ಎಂದರು. ಜೂನ್ 30ರಿಂದ ಜುಲೈ 29ರವರೆಗೆ ನಡೆಯಲಿರುವ ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK